ಅಹರ್ನಿಶಂ ಜಾಗರಣೆಯಿಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಹಿಂದೂ ಸ್ವಯಂಸೇವಕ ಸಂಘದ ವತಿಯಿಂದ ಆರಿಝೋನಾ ಕಣಿವೆಯ ಮೂರು ವಿವಿಧ ಸ್ಥಳಗಳಲ್ಲಿ ಗುರುವಂದನಾ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮಗಳಲ್ಲಿ 260ಕ್ಕೂ ಹೆಚ್ಚು ಜನರು ಪಾಲ್ಗೊಂಡರು. 61 ಮಂದಿ ಶಿಕ್ಷಕರಿಗೆ ಅವರ ವಿದ್ಯಾರ್ಥಿಗಳು ಗೌರವ ಸಮರ್ಪಿಸಿದರು.

ಸಂಪುಟ : 45 | ಸಂಚಿಕೆ : 4 | ಜ್ಯೇಷ್ಠ–ಆಷಾಢ | ಕಲಿಯುಗಾಬ್ದ 5125 | 01–06–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಪರಿಸರ ಸಂರಕ್ಷಣೆ ನಮ್ಮ ಕರ್ತವ್ಯದ ಅನುಷ್ಠಾನದಿಂದ ಮಾತ್ರ ಸಾಧ್ಯ

ಪರಿಸರ ಸಂರಕ್ಷಣೆಗಾಗಿ ಹಲವಾರು ಚಟುವಟಿಕೆಗಳ ಸಹಿತ ಜನ ಸಹಭಾಗಿತ್ವದೊಂದಿಗೆ ಕಾರ್ಯ ಮಾಡುತ್ತಿರುವ ಅಖಿಲ ಭಾರತೀಯ ತಂಡವೆ ಪರ್ಯಾವರಣ ಸಂರಕ್ಷಣಾ ಗತಿವಿಧಿ. ನಮಗೆ ಗೊತ್ತಿರದೆಯೇ ನಮ್ಮ ಜೀವನ ಶೈಲಿಯ ಭಾಗವೇ ಆಗಿರುವ ಹಲವಯ ಸಂಗತಿಗಳು ಪರಿಸರಕ್ಕೆ ದಿನನಿತ್ಯ ಪೂರಕವಾಗಿರುವಲ್ಲಿ ಸಹಾಯ ಮಾಡುತ್ತಿವೆ. ಧಾರ್ಮಿಕ ಆಚರಣೆಗಳನ್ನು ಪ್ರಕೃತಿಯ ಸಮನ್ವಯದೊಂದಿಗೆ ಆಚರಿಸುವುದು, ಪರಿಸರದ ಪ್ರತಿ ಅಂಶವನ್ನೂ ದೈವತ್ವಕ್ಕೆ ಸಮೀಕರಿಸುವುದು, ವನ ಮತ್ತು ಜಲಮೂಲಗಳನ್ನು ಮಾತೆಯ ರೂಪದಲ್ಲಿ ಕಾಣುವುದು, ನೀರಿನ ಮಿತವ್ಯಯ, ವೃಕ್ಷಾರೋಪಣ, ಹೆಚ್ಚು ಕಸ ಉತ್ಪತ್ತಿ ಮಾಡದೆ ಇರುವುದು, ಪ್ರಾಣಿ, ಪಕ್ಷಿ, ಕ್ರಿಮಿಕೀಟಗಳ ಬಗ್ಗೆ ಆದರ ಮತ್ತು ಪ್ರೀತಿ ಹೀಗೆ ಅನೇಕ ಸಂಗತಿಗಳ ಮೂಲಕ ನಮಗೆ ಗೊತ್ತಿಲ್ಲದೆಯೇ ಋಷಿಗಳು ಹಾಕಿಕೊಟ್ಟ ದಾರಿಯಲ್ಲಿ ನಡೆಯುತ್ತಿದ್ದೇವೆ ಎನ್ನುವುದನ್ನು ಪ್ರಮಾಣೀಕರಿಸುತ್ತದೆ. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರಭಾವದ ಕಾರಣದಿಂದಾಗಿ ಅವರ ಜೀವನಶೈಲಿ ನಮ್ಮನ್ನು ಆವರಿಸಿಕೊಳ್ಳುತ್ತಿದೆ. ಇದು ನಮ್ಮ ಪರಿಸರಕ್ಕೆ ಧಕ್ಕೆ ತರುತ್ತಿದೆ. ಹೀಗೆ ಮುಂದುವರಿದರೆ ಕುಡಿಯಲು ಯೋಗ್ಯವಲ್ಲದ ನೀರು, ಕಲುಷಿತ ಗಾಳಿ, ವಿಷಭರಿತ ಭೂಮಿ, ಸಮತೋಲನಕ್ಕಿರದ ಜೀವಸಂಕುಲದ ಪೃಥ್ವಿಯನ್ನು ಕಾಣುವುದರಲ್ಲಿ ಸಂದೇಹವಿಲ್ಲ. ಈ ವಿಪರೀತಗಳ ಅರಿವಿನೊಂದಿಗೆ ಮುಂದೆ ಬರುವ ಇಂತಹ ಗಂಭೀರ ಪರಿಸ್ಥಿತಿಗಳನ್ನು ಸಮರ್ಥವಾಗಿ ನಿಭಾಯಿಸಲು ಪರ್ಯಾವರಣ ಸಂರಕ್ಷಣಾ ತಂಡ ಶ್ರಮಿಸುತ್ತಿದೆ. ಜಲ, ವೃಕ್ಷ, ಕಸ ನಿರ್ವಹಣೆ, ಜೀವಸಂಕುಲ ಮತ್ತು ಇಂಧನಗಳ ವಿಷಯದಲ್ಲಿ ಪಟ್ಟಣ ಮತ್ತು ಹಳ್ಳಿಗಳು, ಶಿಕ್ಷಣ ಸಂಸ್ಥೆಗಳು, ಧಾರ್ಮಿಕ ಮಠ ಮಾನ್ಯಗಳು, ನಾರೀಶಕ್ತಿ ಮತ್ತು ಜನ ಸಹಭಾಗಿತ್ವದೊಂದಿಗೆ ಜನ ಜಾಗೃತಿ ತರುವುದು ಮತ್ತು ಮಾದರಿಗಳನ್ನೂ ನಿರ್ಮಿಸುವ ಕಾರ್ಯವನ್ನು ಮಾಡುತ್ತಿದೆ.




## ಪರ್ಯಾವರಣ ಸಂರಕ್ಷಣ ಗತಿವಿಧಿಯ ಹಿನ್ನೆಲೆ:

ರಾಷ್ಟ್ರೀಯ ಸ್ವಯಂಸೇವಕ ಸಂಘ ಹಿಂದೂ ಸಂಘಟನಾ ಕಾರ್ಯದ ಜೊತೆಗೆ ಹಲವು ಸಮಾಜಮುಖಿ ಕಾರ್ಯಗಳನ್ನೂ ತನ್ನ ವಿವಿಧ ಗತಿವಿಧಿಗಳ ಮೂಲಕ ಮಾಡುತ್ತಿದೆ. 2019 ಮಾರ್ಚ್ 10 ರಂದು ಗ್ವಾಲಿಯರ್‌ನಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರತಿನಿಧಿ ಸಭೆಯಲ್ಲಿ ಪರ್ಯಾವರಣ ಸಂರಕ್ಷಣಾ ಗತಿವಿಧಿಯನ್ನು ಪ್ರಾರಂಭಿಸಲಾಯಿತು. ಅಂದಿನ ಸರಕಾರ್ಯವಾಹ ಗೌರವಾನ್ವಿತ ಭಯ್ಯಾಜಿ ಜೋಶಿ ಪರ್ಯಾವರಣ ಸಂರಕ್ಷಣಾ ಗತಿವಿಧಿಯ ಅಗತ್ಯತೆಯ ಕುರಿತು ತಿಳಿಸಿದರು. ಪರಿಸರ ಮಾಲಿನ್ಯ ಜಗತ್ತಿನ ಮುಂದೆ ಗಂಭೀರ ಸಮಸ್ಯೆಯ ರೂಪದಲ್ಲಿದೆ. ಸಂಘವು ದೇಶಾದ್ಯಂತ ವಿವಿಧ ಚಟುವಟಿಕೆಗಳ ಮೂಲಕ ಪರಿಸರ ಸಂರಕ್ಷಣೆಗಾಗಿ ಕೆಲಸ ಮಾಡುತ್ತದೆ. ಇದರಲ್ಲಿ ಜಲ ಸಂರಕ್ಷಣೆ, ಗಿಡ ನೆಡುವುದು, ಪ್ಲಾಸ್ಟಿಕ್ ಮತ್ತು ಥರ್ಮಾಕೋಲ್ ಮುಕ್ತ ಪರಿಸರದ ಪ್ರಯತ್ನದಲ್ಲಿ ಸಮಾಜದೊಂದಿಗೆ ಕೆಲಸ ಮಾಡಲಾಗುವುದು. ಈ ಹಿಂದೆಯೂ ಸಂಘದ ಸ್ವಯಂಸೇವಕರು ತಮ್ಮ ಮಟ್ಟದಲ್ಲಿ ಪರಿಸರ ಸಂರಕ್ಷಣೆಯ ಪ್ರಯತ್ನದಲ್ಲಿ ತೊಡಗಿದ್ದು, ಸಮಾಜದಲ್ಲಿ ಜಾಗೃತಿಯೂ ಬರುತ್ತಿದೆ. ಆದರೆ ಈಗ ಸಂಘವು ಸಂಘಟಿತವಾಗಿ ಮತ್ತು ಯೋಜಿತವಾಗಿ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತದೆ ಎಂದು ತಿಳಿಸಿದರು.

## ಪರ್ಯಾವರಣ ಗತಿವಿಧಿಯ ಮೂಲಕ ಸಾಕಾರಗೊಂಡ ಕೆಲವು ಸಂರಕ್ಷಣಾ ಕಾರ್ಯಗಳು:

ಸ್ವಚ್ಛ ಸಾಗರ ಸುರಕ್ಷಿತ ಸಾಗರದ ಭಾಗವಾಗಿ 53 ಕಡಲ ತಡಿಗಳನ್ನು 7000ಕ್ಕೂ ಅಧಿಕ ಜನರ ಸಹಭಾಗಿತ್ವ, 184 ಎನ್‌ಜಿಒಗಳ ಸಹಕಾರದೊಂದಿಗೆ 30000 ಪ್ಲಾಸ್ಟಿಕ್ ತ್ಯಾಜ್ಯವನ್ನು ಮುಕ್ತಗೊಳಿಸಲಾಗಿದೆ. ಬೆಂಗಳೂರಿನ ವರ್ತೂರಿನಲ್ಲಿ 9 ಎಕರೆ ಕಿರು ಅರಣ್ಯವನ್ನು ನಿರ್ಮಿಸಲಾಗಿದೆ. ಕೊಡಗಿನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವೃಕ್ಷಾರೋಪಣ ಮಾಡಲಾಗಿದೆ. ಬೆಂಗಳೂರಿನ ಅಕ್ಷಯ ನಗರದ ಎರಡು ಕೆರೆಗಳ ಪುನರುಜ್ಜೀವನಗೊಳಿಸಿ ಅದರ ನಿರಂತರ ನಿರ್ವಹಣೆ ಮಾಡುತ್ತ ಕಳೆದ ಹಲವಾರು ವರ್ಷಗಳಿಂದ ಅದಕ್ಕೆ ಗಂಗಾ ಆರತಿ ಮಾಡಿ ಸಂಭ್ರಮಿಸುವಂತೆ ಮಾಡುವಲ್ಲಿ ತಂಡ ಯಶಸ್ವಿಯಾಗಿದೆ. ಹೀಗೆಯೇ ಬನಶಂಕರಿ, ಕೆಂಬತ್ತಹಳ್ಳಿ, ಕಮ್ಮನಹಳ್ಳಿ ಕೆರೆಗಳ ಪುನರುಜ್ಜೀವನ ಮತ್ತು ಶಿವಮೊಗ್ಗದ ಸುಂದರ ಕಲ್ಯಾಣಿ ನಿರ್ಮಾಣ, ಅಕ್ಷಯನಗರ ಬಡಾವಣೆಯಲ್ಲಿ ಮಳೆ ನೀರು ಕಾಲುವೆಗಳಲ್ಲಿ 60 ಇಂಗುಗುಂಡಿಗಳನ್ನು ನಿರ್ಮಿಸಲಾಗಿದೆ. ಯಶವಂತಪುರದಲ್ಲಿ ರೈಲಿನ ಬೋಗಿಗಳನ್ನು ತೊಳೆದ ನೀರಿನ ಮರುಬಳಕೆಯಿಂದ ನಾಲ್ಕು ಲಕ್ಷ ಲೀಟರ್‌ಗಳಷ್ಟು ನೀರನ್ನು ಉಳಿಸಲಾಗಿದೆ. ಬೆಂಗಳೂರಿನ 1800 ಮನೆಗಳಿರುವ ಅಪಾರ್ಟ್ಮೆಂಟ್‌ನಲ್ಲಿ, ಮನೆಗೆ 3 ರಂತೆ ನಲ್ಲಿಗೆ ಎರೇಟರ್‌ಗಳನ್ನು ಅಳವಡಿಸಿ ವರ್ಷಕ್ಕೆ 24 ಲಕ್ಷ ರೂಪಾಯಿ ಉಳಿತಾಯ ಮಾಡಲಾಗಿದೆ. ಅಲ್ಲಿಯೇ ಮಳೆ ನೀರು ಸಂಗ್ರಹ ಹೀಗೆ ಹಲವಾರು ಮಾದರಿಗಳನ್ನು ಕಾರ್ಯಕರ್ತರು ಜನಸಹಭಾಗಿತ್ವದೊಂದಿಗೆ ನಿರ್ಮಿಸಿದ್ದಾರೆ

## ನಮ್ಮ ಜವಾಬ್ದಾರಿ:

**ಜಲಸಂರಕ್ಷಣೆ:** ಈ ವಿಷಯದ ಬಗ್ಗೆ ಸಾಕಷ್ಟು ಮಾಹಿತಿ ಇದ್ದರೂ ಅದರ ಅನುಷ್ಠಾನ ವೈಯಕ್ತಿಕವಾಗಿ ಪ್ರಾರಂಭವಾಗಬೇಕಿದೆ. ನಮ್ಮ ನಲ್ಲಿಯಲ್ಲಿ ಬರುವ ನೀರು ಎಲ್ಲಿಂದ ಬರುತ್ತದೆ ಎಂಬ ಅರಿವು ಮತ್ತು ಅದರ ಮಿತ ವ್ಯಯ, ನದಿ, ಕೆರೆ, ಕುಂಟೆ, ಕಲ್ಯಾಣಿ ಬಾವಿ ಹೀಗೆ ಎಲ್ಲ ಜಲ ಮೂಲಗಳ ರಕ್ಷಣೆ, ಮಳೆ ನೀರನ್ನು ಹಿಡಿದಿಟ್ಟುಕೊಂಡು ಅದರ ಉಪಯೋಗ, ಭೂಮಿಗೆ ಜಲ ಮರುಪೂರಣ ಮುಂತಾದ ಕಾರ್ಯಗಳ ಅನುಷ್ಠಾನಕ್ಕೆ ಪ್ರತಿ ವ್ಯಕ್ತಿ ಆಸಕ್ತಿಯನ್ನು ತೋರಿಸಬೇಕು. ನನ್ನಿಂದಾಗಿ ನೀರು ಪೋಲಾಗುವುದಿಲ್ಲ, ಪೋಲಾಗುತ್ತಿರುವ ನೀರನ್ನು ಕಂಡು ಸುಮ್ಮನಿರುವುದಿಲ್ಲ ಎನ್ನುವ ಧ್ಯೇಯಕ್ಕಾಗಿ ಕಾರ್ಯಪ್ರವೃತ್ತರಾಗಬೇಕಿದೆ.

**ವೃಕ್ಷಾರೋಪಣ:** ಒಂದು ವೃಕ್ಷ ಹತ್ತು ಜನ ಮಕ್ಕಳಿಗೆ ಸಮ ಎನ್ನುವುದನ್ನು ಪ್ರಾಜ್ಞರ ನುಡಿಗಳು ಸಾಕ್ಷೀಕರಿಸುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಇಂದು ಆಗುತ್ತಿರುವ ಮರಗಳ ಮಾರಣ ಹೋಮಕ್ಕೆ ನಾವೆಲ್ಲರೂ ಪ್ರತ್ಯಕ್ಷ ಹಾಗೂ ಪರೋಕ್ಷ ಕಾರಣೀಭೂತರು. ಪ್ರಕೃತಿಯನ್ನು ಪಡೆದದ್ದನ್ನು ಮರಳಿ ಅದರ ಮಡಿಲಿಗೆ ಅರ್ಪಿಸುವುದು ನಮಗಿರುವ ಬಹುದೊಡ್ಡ ಕರ್ತವ್ಯ. ಪ್ರತಿ ಮನೆಯ ಸದಸ್ಯರು ಕನಿಷ್ಠ ಒಂದು ಗಿಡವನ್ನು ನೆಟ್ಟು ಮುಂದಿನ ಪೀಳಿಗೆಗೆ ಸಹಕಾರಿಯಾಗುವಂತಹ ಕಾಯಕದಲ್ಲಿ ತೊಡಗಬೇಕು. ಮರವನ್ನು ಉಳಿಸಿ, ಬೆಳೆಸಿ, ಮರವನ್ನು ಬೆಳೆಸುವ ಪ್ರವೃತ್ತಿಯನ್ನು ಟ್ರೆಂಡ್ ಆಗಿಸುವ ಜವಾಬ್ದಾರಿ ನಮ್ಮೆಲ್ಲರದ್ದು. ನಗರ ಪ್ರದೇಶಗಳಲ್ಲಿ ತಾರಸಿ ತೋಟಗಳನ್ನು ನಿರ್ಮಿಸುವ ಪ್ರಮಾಣ ನಮ್ಮ ಪ್ರವೃತ್ತಿಯ ಕಾರಣದಿಂದ ಹೆಚ್ಚಾಗಬೇಕಿದೆ.

**ತ್ಯಾಜ್ಯ ನಿರ್ವಹಣೆ:** ಹಸಿ ಕಸ ಮತ್ತು ಒಣ ಕಸವನ್ನು ಬೇರ್ಪಡಿಸಿ ಅದರ ವಿಲೇವಾರಿಯನ್ನು ನಿರ್ವಹಿಸುವುದು ಸೂಕ್ತ. ಮನೆಯ ಹಸಿ ಕಸವನ್ನು ಮನೆಯಲ್ಲಿಯೇ ಗೊಬ್ಬರ ಮಾಡಿ ಬಳಸುವುದು ಉತ್ತಮ.

### ಹೀಗೊಂದು ಲೆಕ್ಕಾಚಾರ

ತುಂಬಾ ಉಪಯುಕ್ತತೆ ಇರುವ ದುಬಾರಿಯಾದ ವಸ್ತುವನ್ನು ತುಂಬಾ ಜೋಪಾನವಾಗಿ ಇಟ್ಟುಕೊಳ್ಳುತ್ತೇವೆ. ಕಡಿಮೆ ಬೆಲೆಯ, ಕಡಿಮೆ ಉಪಯುಕ್ತತೆಯ ವಸ್ತುಗಳನ್ನು ಬಳಸಿ ಬಿಸಾಡುತ್ತೇವೆ. ನಮ್ಮ ಪ್ರತಿಯೊಂದು ವೈಯಕ್ತಿಕ ಹೆಜ್ಜೆ ಪರಿಸರಕ್ಕೆ ಹಾನಿ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಳ್ಳೋಣ. ಉದಾಹರಣೆಗೆ ಒಂದು ಮರ ಪ್ರತಿ ವರ್ಷ 21.7 ಕಿಲೋ ಗ್ರಾಮ್‌ಗಳಷ್ಟು ಕಾರ್ಬನ್ ಡೈ ಆಕ್ಸೈಡ್‌ನ್ನು ಸೇವಿಸುತ್ತದೆ ಆದರೆ ಪ್ರತಿ ಭಾರತೀಯನ ಸರಾಸರಿ ಕಾರ್ಬನ್ ಎಮಿಶನ್ 2000 ಕಿಲೋಗ್ರಾಮ್‌ಗಳಷ್ಟು. ಸರಾಸರಿ ಆಯಸ್ಸನ್ನು ಗಮನದಲ್ಲಿಟ್ಟುಕೊಂಡರೆ ಕನಿಷ್ಠ 340 ಮರಗಳು ಪ್ರತಿ ವ್ಯಕ್ತಿಗೆ ಬೇಕು. ಆದರೆ ಪರಿಸರ ಹಾನಿಯ ವೇಗ ನೋಡಿದರೆ ಮರಗಳನ್ನು ಹೆಚ್ಚು ನೆಡಬೇಕಾಗುತ್ತದೆ. ಅಷ್ಟೇ ಅಲ್ಲ ಪ್ರತಿ ವ್ಯಕ್ತಿ ಜೀವನ ಶೈಲಿ ಬದಲಾವಣೆಗೆ ಒತ್ತು ಕೊಟ್ಟು ಜೂನ್ 5 ವಿಶ್ವ ಪರಿಸರ ದಿನವನ್ನು ಗಮನದಲ್ಲಿಟ್ಟುಕೊಂಡು ಮುಂದಿನ 4 ತಿಂಗಳುಗಳ ಕಾಲ ಸತತ ವೃಕ್ಷಾರೋಪಣ ಆಗಬೇಕು. ನೆನಪಿರಲಿ ಒಂದು ಬೀಜ ಸಸಿಯಾಗಿ 6 ಅಡಿಯಷ್ಟು ಬೆಳೆಯಲು 2 ವರ್ಷ ಬೇಕು. ಹಾಗೆ ಬೆಳೆಯಲು ಅದಕ್ಕೆ ಗೊಬ್ಬರ ನೀರು ಕೊಟ್ಟು ಜೀವವನ್ನು ಕಾಪಾಡಿರುತ್ತಾರೆ. ಹಾಗಾಗಿ ನಾವು ಅದನ್ನು ಮಗುವಿನ ಹಾಗೆ ನೋಡಿಕೊಳ್ಳಬೇಕು.

ಪ್ಲಾಸ್ಟಿಕ್ ಅನ್ನು ದೃಢ ನಿರ್ಧಾರದಿಂದ ತ್ಯಜಿಸೋಣ. ಈಗಾಗಲೇ ಬಳಸಿದ ಪ್ಲಾಸ್ಟಿಕ್ ಅನ್ನು ಮರುಬಳಸಬೇಕು. ನಗರ ಪ್ರದೇಶಗಳಲ್ಲಿ ಏರೋಬಿಕ್ ಕಾಂಪೋಸ್ಟ್, ಪಾಟ್ ಕಾಂಪೋಸ್ಟ್ ನಂತಹ ಉಪಕ್ರಮಗಳನ್ನು ರೂಢಿಸಿಕೊಳ್ಳಬೇಕು.

**ಜೀವಸಂಕುಲ:** ನಮ್ಮ ನಿವಾಸಗಳು ಜೀವಸಂಕುಲದ ಪರವಾಗಿರುವಂತಹ ವಾತಾವರಣದಂತಿರಬೇಕು. ಬೇಸಿಗೆಯಲ್ಲಿ ತಾರಸಿಯ ಮೇಲೆ ಪಕ್ಷಿಗಳಿಗೆ ನೀರು ಇಡುವುದು. ನಮ್ಮ ವಠಾರ ಬೀದಿಗಳಲ್ಲಿರುವ ಮೂಕಪ್ರಾಣಿಗಳ ಆಹಾರಕ್ಕೆ ಸಹಕರಿಸುವಂತಹ ಕೆಲಸವನ್ನು ಎಲ್ಲರೂ ಜೊತೆಯಾಗಿ ಮಾಡಬೇಕು.

**ಇಂಧನ:** ಇಂಧನವನ್ನು ಮಿತವಾಗಿ ಬಳಸಬೇಕು. ಅದರ ಉಳಿತಾಯಕ್ಕಾಗಿ ನಾವು ನಮ್ಮ ಜೀವನಶೈಲಿಯಲ್ಲಿ ಮಾಡಿಕೊಳ್ಳುವ ಸಣ್ಣ ಬದಲಾವಣೆ ಮಹತ್ತರದ ಕೊಡುಗೆಯಾಗುತ್ತದೆ. ಉದಾಹರಣೆಗೆ ಉಪಯೋಗಿಸದೆ ಇದ್ದ ದೀಪ ಮತ್ತು ಫ್ಯಾನ್‌ಗಳನ್ನೂ ಆರಿಸುವುದು.

ಪರ್ಯಾವರಣ ಸಂರಕ್ಷಣೆಯ ಕಾರ್ಯವೈಖರಿ ಕುರಿತು ಏಕೋ ಮಿತ್ರಂ ಆ್ಯಪ್ ಡೌನ್‌ಲೋಡ್ ಮಾಡಿ ತಿಳಿದುಕೊಳ್ಳಬಹುದು.

2x2x2 ಗುಂಡಿ, ಒಣಗಿದ ಎಲೆ, ಹಸುವಿನ ಗೊಬ್ಬರ, ಬೇವಿನ ಪುಡಿ, ಹೀಗೆ ಅದರ ಅಡಿಗೆ ಹಾಕಿ ವೃಕ್ಷಾರೋಪಣ ಮಾಡಿ ಆಳವಾದ ಪಾಟಿ ಮಾಡಿ, ಸಾಕಷ್ಟು ನೀರು ಕೊಡಬೇಕು. ಅದಕ್ಕೆ ಸೂಕ್ತ ರಕ್ಷಣೆ ಮುಖ್ಯ. ಪರ್ಯಾವರಣ ಸಂರಕ್ಷಣ ತಂಡದ ಸಂಯೋಜಕರು ದೇಶದಾದ್ಯಂತ ಸಾರ್ವಜನಿಕರ ಸಮಿತಿಗಳನ್ನು ರಚಿಸಿ ಇದನ್ನೊಂದು ಅಭಿಯಾನವಾಗಿ ಕಾರ್ಯ ನಿರ್ವಹಿಸುತ್ತಿದೆ. ತಕ್ಷಣ ನಾವಿರುವ ವಸತಿಗಳಲ್ಲಿ 11 ಜನರ ತಂಡವೊಂದನ್ನು ಮಾಡಿ ಅದರ ಹೆಸರನ್ನು ವಸತಿ + ದೇಶಕ್ಕಾಗಿ ಒಂದು ಗಿಡ ಅನ್ನುವ ಹೆಸರನ್ನು ಕೊಡೋಣ ಉದಾಹರಣೆಗೆ "ಅಕ್ಷಯನಗರ ದೇಶಕ್ಕಾಗಿ ಒಂದು ಗಿಡ ಸಮಿತಿ" ವೃಕ್ಷಾರೋಪಣಕ್ಕೆ ಸಜ್ಜಾಗೋಣ


## ಸಂಸ್ಮರಣೆ

# ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ (6ನೇ ಜೂನ್, 1891 – 6ನೇ ಜೂನ್, 1986)

‘ಕನ್ನಡ ಸಣ್ಣಕತೆಗಳ ಪಿತಾಮಹ’, ‘ಕನ್ನಡದ ಆಸ್ತಿ’ ಎಂದೇ ಪ್ರಸಿದ್ಧರಾದ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರರು ಸಾಹಿತ್ಯದ ಸರ್ವಕ್ಷೇತ್ರಗಳಲ್ಲೂ ಸೇವೆ ಸಲ್ಲಿಸಿ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ ಸಾಧಕ. ತಮ್ಮ ಉನ್ನತ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದ ನಂತರ ಕನ್ನಡ ನಾಡು ನುಡಿಯ ಉತ್ಕರ್ಷಕ್ಕೇ ತಮ್ಮ ಬದುಕನ್ನು ಮುಡಿಪಾಗಿಟ್ಟವರು. ಜ್ಞಾನಪೀಠ ಪ್ರಶಸ್ತಿ ವಿಜೇತರು. ಕನ್ನಡ ಸಾಹಿತ್ಯ ಲೋಕದಲ್ಲಿ ಮಾಸ್ತಿ ಎಂದೇ ಖ್ಯಾತರಾಗಿರುವ ಈ ಸಾಹಿತಿ ಶ್ರೀನಿವಾಸ ಎಂಬ ಕಾವ್ಯನಾಮದಡಿಯಲ್ಲಿ ಬರೆಯುತ್ತಿದ್ದರು.

ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಮಾಸ್ತಿ ಗ್ರಾಮದಲ್ಲಿ ಜೂನ್ 6, 1891ರಲ್ಲಿ ಜನಿಸಿದರು. ಮೆಟ್ರಿಕ್ಯುಲೇಷನ್ (1907), ಎಫ್ ಎ (1909), ಬಿ ಎ (ಮದರಾಸು ವಿಶ್ವವಿದ್ಯಾಲಯ 1912), ಮೈಸೂರು ಸಿವಿಲ್ ಸರ್ವಿಸ್ (1913), ಎಂ. ಎ (ಮದರಾಸು ವಿಶ್ವವಿದ್ಯಾಲಯ 1914) ಪರೀಕ್ಷೆಗಳಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿ, 1914ರಲ್ಲಿ ಮೈಸೂರು ಸರ್ಕಾರದಲ್ಲಿ ಅಸಿಸ್ಟೆಂಟ್ ಕಮಿಷನರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. 1914ರಿಂದ 1943 ರವರೆಗೆ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿ ನಿವೃತ್ತರಾದರು. 1923ರಲ್ಲಿ ಅವರ ಮೊದಲ ಪುಸ್ತಕ ಕೆಲವು ಸಣ್ಣ ಕಥೆಗಳು ಪ್ರಕಟಗೊಂಡಿತು. ಸಣ್ಣಕತೆ, ನೀಳ್ಗತೆ, ಕಾದಂಬರಿ, ಕಾವ್ಯ, ನಾಟಕ, ಜೀವನ ಚರಿತ್ರೆ, ಪ್ರಬಂಧ, ವಿಮರ್ಶೆ, ಸಂಪಾದನೆ, ಅನುವಾದ – ಹೀಗೆ ಕನ್ನಡ ಸಾಹಿತ್ಯದ ಪ್ರತಿಯೊಂದು ಕ್ಷೇತ್ರಕ್ಕೂ ತಮ್ಮ ಕೊಡುಗೆಯನ್ನು ನೀಡಿದ್ದಾರೆ. 1983ರಲ್ಲಿ ಕೊಡಗಿನ ಕಡೆಯ ರಾಜ ಚಿಕವೀರ ರಾಜೇಂದ್ರನ ಕುರಿತು ಬರೆದ ‘ಚಿಕ್ಕವೀರ ರಾಜೇಂದ್ರ’ ಕಾದಂಬರಿಗಾಗಿ ಜ್ಞಾನಪೀಠ ಪ್ರಶಸ್ತಿಯಿಂದ ಪುರಸ್ಕೃತಗೊಂಡ ಮಾಸ್ತಿಯವರು ಕನ್ನಡಕ್ಕೆ ನಾಲ್ಕನೇ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟರು. ಜೀವನ ಪರ್ಯಂತ ಕನ್ನಡ ಸೇವೆಯನ್ನು ಮಾಡಿದ ಮಾಸ್ತಿಯವರು ಜೂನ್ 6 1986ರಂದು ನಿಧನ ಹೊಂದಿದರು.

ಒಂದು ಕಾಲಕ್ಕೆ ಶ್ರೀಮಂತಿಕೆಯಿಂದ ವಿಜೃಂಭಿಸಿದ ‘ಪೆರಿಯಾತ್’ (ದೊಡ್ಡ) ಕುಟುಂಬ ಮಾಸ್ತಿಯವರದ್ದಾದರೂ ಅವರು ಹುಟ್ಟುವ ಕಾಲಕ್ಕೆ ಮನೆಯಲ್ಲಿ ಬಡತನವಿತ್ತು. ಅವರ ವಿದ್ಯಾಭ್ಯಾಸ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಜರುಗಿತು. ಅವರ ಹಿರಿಯರು ಬಹು ಜನಕ್ಕೆ ಅನ್ನ ಹಾಕಿ ಹೆಸರು ಗಳಿಸಿದ್ದರಾದರೂ ಅವರು ವಾರದ ಮನೆಗಳಲ್ಲಿ ಊಟಮಾಡಿ ವಿದ್ಯಾಭ್ಯಾಸ ಮಾಡಬೇಕಾಯಿತು. ಹೊಂಗೇನಹಳ್ಳಿ, ಯಲಂದೂರು, ಶಿವಾರಪಟ್ಟಣ, ಮಳವಳ್ಳಿ, ಮೈಸೂರು, ಕಡೆಗೆ ಮದರಾಸು ಹೀಗೆ ನಾನಾ ಕಡೆಗಳಲ್ಲಿ ತಮ್ಮ ಬಂಧುಗಳ ನೆರವಿನಿಂದ ವಿದ್ಯಾಭ್ಯಾಸ ಮಾಡಿ ಎಂ.ಎ. ಪದವಿ ಗಳಿಸಿದರು. ತಮ್ಮ ವಿದ್ಯಾಭ್ಯಾಸ ಕಾಲದಲ್ಲಿ ಮಾಸ್ತಿ ಯಾವ ಪರೀಕ್ಷೆಯಲ್ಲೂ ಪ್ರಥಮ ಸ್ಥಾನವನ್ನು ಬೇರೆಯವರಿಗೆ ಬಿಟ್ಟುಕೊಡಲಿಲ್ಲ. ಮದ್ರಾಸಿನಲ್ಲಿ ಇಂಗ್ಲೀಷ್ ಎಂ.ಎ. ಮಾಡಿಕೊಂಡು ಚಿನ್ನದ ಪದಕ ಗಳಿಸಿದ ಮಾಸ್ತಿ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸುಮಾರು ಒಂದೂವರೆ ತಿಂಗಳು ಉಪಾಧ್ಯಾಯರಾಗಿದ್ದು ಬೆಂಗಳೂರಿಗೆ ಬಂದು ಸಿವಿಲ್ ಪರೀಕ್ಷೆಗೆ ಕುಳಿತು ಅಲ್ಲಿಯೂ ಪ್ರಥಮ ಸ್ಥಾನಿಯಾಗಿ ತೇರ್ಗಡೆಯಾದರು. ಸರ್ಕಾರದಲ್ಲಿ ಅಸಿಸ್ಟೆಂಟ್ ಕಮೀಷನರಾಗಿ ಕೆಲಸಕ್ಕೆ ಸೇರಿ ಸಮರ್ಪಕವಾಗಿ ಕೆಲಸ ನಿರ್ವಹಿಸಿದರು.



ಇದರೊಂದಿಗೆ ಸಾಹಿತ್ಯ ರಚನೆ ಅವರ ಪ್ರವೃತ್ತಿಯಾಗಿ ಬೆಳೆಯಿತು.

20ನೆಯ ಶತಮಾನದ ಆರಂಭದಲ್ಲಿ ಕನ್ನಡ ಭಾಷೆಗೆ ಹೇಳಿಕೊಳ್ಳುವಂಥ ಪ್ರೋತ್ಸಾಹವಿರದ ಕಾಲದಲ್ಲಿ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಮಾಸ್ತಿಯವರು ಸಾಹಿತ್ಯ ರಚನೆಯ ಕೆಲಸವನ್ನು ಕೈಗೊಂಡರು. ಸಣ್ಣ ಕತೆಗಳ ರಚನೆ ಅವರು ಪ್ರಧಾನವಾಗಿ ಆರಿಸಿಕೊಂಡ ಸಾಹಿತ್ಯ ಪ್ರಕಾರ. 1910ರಲ್ಲಿ ಬರೆದ ‘ರಂಗನ ಮದುವೆ’ ಎಂಬ ಸಣ್ಣ ಕಥೆಗಳ ಸಂಗ್ರಹದಿಂದ ಹಿಡಿದು ಅವರು ನಿಧನರಾಗುವುದಕ್ಕೆ ಕೆಲವೇ ತಿಂಗಳುಗಳ ಹಿಂದೆ ಪ್ರಕಟವಾದ ‘ಮಾತುಗಾರ ರಾಮಣ್ಣ’ ಎಂಬ ಕೃತಿಯವರೆಗೆ ಅವರು ರಚಿಸಿದ ಕೃತಿಗಳ ಸಂಖ್ಯೆ 123. ಇದರಲ್ಲಿ ಸಣ್ಣಕತೆಗಳು, ಕಾದಂಬರಿಗಳು, ನಾಟಕಗಳು, ವಿಮರ್ಶೆಗಳು, ಪ್ರಬಂಧಗಳು, ಧಾರ್ಮಿಕ ಕೃತಿಗಳು, ಅನುವಾದ, ‘ಜೀವನ’ ಎಂಬ ಅವರೇ ನಡೆಸುತ್ತಿದ್ದ ಪತ್ರಿಕೆಯಲ್ಲಿ ಬರೆದ ಸಂಪಾದಕೀಯ ಲೇಖನಗಳು, ಕವಿತೆಗಳ ಸಂಗ್ರಹ, ಕಾವ್ಯ ಸೇರಿವೆ. ಕನ್ನಡ ಸಣ್ಣಕಥೆಗಳ ಪಿತಾಮಹ ಎನಿಸಿರುವ ಮಾಸ್ತಿಯವರು ‘ಮೊಸರಿನ ಮಂಗಮ್ಮ’, ‘ವೆಂಕಟಿಗನಹೆಂಡತಿ’, ‘ರಂಗಪ್ಪನ ದೀಪಾವಳಿ’, ‘ಸುಬ್ಬಣ್ಣ’, ‘ವೆಂಕಟಸಾಮಿಯ ಪ್ರಣಯ’ ಮೊದಲಾದ 70ಕ್ಕೂ ಅಧಿಕ ಕಥೆಗಳನ್ನು ಬರೆದಿದ್ದಾರೆ. ಜತೆಗೆ ‘ರಾಮನವಮಿ’, ‘ಗೌಡರಮಲ್ಲಿ’, ‘ನವರಾತ್ರಿ’ ಮುಂತಾದ ಕಥನ ಕವನಗಳು, ಬಿನ್ನಹ, ಅರುಣ, ತಾವರೆ, ಮಲಾರ, ಮನವಿ, ಚೆಲವು ಮುಂತಾದ ಕವನ ಸಂಕಲನಗಳು, ಶಾಂತಾ, ತಿರುಪಾವಿ, ಕನಕಣ್ಣ, ಶಿವಛತ್ರಪತಿ, ಯಶೋಧರ, ಮಾಸತಿ, ಅನಾರ್ಕಳಿ, ಪುರಂದರದಾಸ, ಕಾಕನಕೋಟೆ ಮುಂತಾದ ನಾಟಕಗಳು, ಭಾರತತೀರ್ಥ, ಆದಿಕವಿ ವಾಲ್ಮೀಕಿ ಮುಂತಾದ ಪ್ರಬಂಧಗಳನ್ನು ಬರೆದಿದ್ದಾರೆ. ಷೇಕ್ಸ್‌ಪೀಯರನ ನಾಟಕಗಳಾದ ಕಿಂಗ್‌ಲಿಯರ್, ದಿ ಟೆಂಪೆಸ್ಟ್, ಟ್ವೆಲ್ಫ್‌ತ್ ನೈಟ್, ಹ್ಯಾಮ್ಲೆಟ್‌ಗಳನ್ನು ಕನ್ನಡಕ್ಕೆ ತಂದ ಕೀರ್ತಿ ಮಾಸ್ತಿಯವರಿಗೆ ಸಲ್ಲುತ್ತದೆ. ಇತರ ಕೃತಿಗಳು – ಚಿತ್ರಾಂಗದಾ(ಠಾಕೂರರ ಕೃತಿ), ಬಿಜ್ಜಳರಾಯ ಚರಿತ್ರೆ (ಧರಣಿ ಪಂಡಿತನ ಕೃತಿ) ಬಸವಣ್ಣನ ವಚನಗಳನ್ನು ಆಂಗ್ಲಭಾಷೆಗೆ ಅನುವಾದ ಮಾಡಿದ್ದಾರೆ. ಅವರ ಒಂದು ಸಣ್ಣ ಕಥೆಯನ್ನು ರಾಜಾಜಿಯವರು ತಮಿಳಿಗೆ ಅನುವಾದಿಸಿದರು. ಇಂಗ್ಲೀಷ್ ಹಾಗೂ ಇತರ ಭಾರತೀಯ ಭಾಷೆಗಳಿಗೆ ಮಾಸ್ತಿ ಅವರ ಸಣ್ಣ ಕತೆಗಳು ಅನುವಾದಗೊಂಡಿವೆ. ದೂರದರ್ಶನದಲ್ಲಿ ಕೆಲವು ಕತೆಗಳು ಅಭಿನಯಿಸಲ್ಪಟ್ಟು ಪ್ರಸಾರವಾಗಿವೆ.

ಮಾಸ್ತಿ ಅವರ ಎಲ್ಲ ಕೃತಿಗಳಲ್ಲೂ ಕುಶಲತೆ, ಸೌಮ್ಯತೆ, ಜೀವನ ದರ್ಶನಗಳನ್ನು ಸ್ಪಷ್ಟವಾಗಿ ಕಾಣಬಹುದು. ‘ಭಾರತತೀರ್ಥ’, ‘ಆದಿಕವಿ ವಾಲ್ಮೀಕಿ’ ಇವು ಭಾರತ ರಾಮಾಯಣಗಳನ್ನು ಕುರಿತು ಬರೆದಿರುವ ಗ್ರಂಥಗಳಾದರೆ ‘ಶ್ರೀರಾಮ ಪಟ್ಟಾಭಿಷೇಕ’ ಅವರ ಒಂದು ಕಾವ್ಯ. ರವೀಂದ್ರನಾಥ ಠಾಕೂರ್, ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಗಳನ್ನೂ, ಪುರಂದರದಾಸ, ಕನಕದಾಸ, ಅನಾರ್ಕಳಿ, ತಿರುಪಾಣಿ, ಶಿವಾಜಿ ಮೊದಲಾದ ನಾಟಕಗಳನ್ನೂ ಮಾಸ್ತಿ ಬರೆದಿದ್ದಾರೆ. ಮಾಸ್ತಿಯವರು ‘ಜೀವನ’ ಎಂಬ ಸಾಹಿತ್ಯಕ್ಕೆ ಮೀಸಲಾದ ಪತ್ರಿಕೆಯನ್ನು ಆರಂಭಿಸಿ ಸುಮಾರು 30 ವರ್ಷಗಳ ಕಾಲ ಅದರ ಸಂಪಾದಕರಾಗಿ ಪತ್ರಿಕೋದ್ಯಮ ಕ್ಷೇತ್ರದಲ್ಲೂ ಕಾರ್ಯನಿರ್ವಹಿಸಿದ್ದಾರೆ. ಪತ್ರಿಕೆಯಲ್ಲಿ ಅವರು ಬರೆದ ಲೇಖನಗಳು ‘ಸಂಪಾದಕೀಯ’ ಎಂಬ ಹೆಸರಿನಲ್ಲಿ ಐದು ಭಾಗಗಳಾಗಿ ಪ್ರಕಟವಾಗಿವೆ. ಮಾಸ್ತಿ ಅವರಿಗೆ ಸಂದ ಗೌರವ, ಪ್ರಶಸ್ತಿಗಳು ಅಪಾರ. ‘ಮಾಸ್ತಿ ಕನ್ನಡದ ಆಸ್ತಿ’ ಎಂಬ ಹೇಳಿಕೆ ಒಂದು ನಾಣ್ಣುಡಿಯಾಗಿದೆ. ಎಲ್ಲ ಸಾಹಿತಿಗಳಿಗೂ ಅವರು ‘ಅಣ್ಣ ಮಾಸ್ತಿ’ಯಾಗಿದ್ದರು. ವರಕವಿ ದ ರಾ ಬೇಂದ್ರೆ ಮಾಸ್ತಿಯವರನ್ನು ಹಿರಿಯಣ್ಣ ಎಂದು ಗೌರವಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮಾಸ್ತಿ ಸೇವೆ ಸಲ್ಲಿಸಿದರು. 1929ರಲ್ಲಿ ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು. ಮೈಸೂರು ಮಹಾರಾಜರು ‘ರಾಜಸೇವಾ ಪ್ರಸಕ್ತ’ ಎಂದು ಗೌರವಿಸಿದ್ದರು. 1972ರಲ್ಲಿ ‘ಶ್ರೀನಿವಾಸ’ ಎಂಬ ಅವರ ಅಭಿನಂದನಾ ಗ್ರಂಥ ಪ್ರಕಟವಾಯಿತು. 1993 ರಿಂದ ‘ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪ್ರಶಸ್ತಿ’ ಅನ್ನು ವಾರ್ಷಿಕವಾಗಿ ಕರ್ನಾಟಕದ ಹೆಸರಾಂತ ಬರಹಗಾರರಿಗೆ ನೀಡಲಾಗುತ್ತಿದೆ, ಇದು ಅವರ ನಿರಂತರ ಪರಂಪರೆಗೆ ಸಾಕ್ಷಿಯಾಗಿದೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಕನ್ನಡ ಸಾಹಿತ್ಯದಲ್ಲಿ ಅಚ್ಚಳಿಯದ ಛಾಪನ್ನು ಮೂಡಿಸಿದ ಸಮೃದ್ಧ ಬರಹಗಾರರಾಗಿದ್ದರು. ಅವರು ಸಾಂಪ್ರದಾಯಿಕ ವಿಷಯಗಳನ್ನು ಆಧುನಿಕ ತಂತ್ರಗಳೊಂದಿಗೆ ಬೆರೆಸಿ, ಆಕರ್ಷಣೀಯ ಮತ್ತು ಚಿಂತನೆಗೆ ಪ್ರೇರೇಪಿಸುವ ಕೃತಿಗಳನ್ನು ರಚಿಸುವಲ್ಲಿ ನಿಪುಣರಾಗಿದ್ದರು. ಅವರ ಬರವಣಿಗೆಯ ಶೈಲಿಯು ಅನನ್ಯ, ಆಕರ್ಷಕ ಮತ್ತು ಅಧಿಕೃತವಾಗಿದ್ದು, ಅವರನ್ನು ಅವರ ಕಾಲದ ಅತ್ಯಂತ ಪ್ರೀತಿಯ ಬರಹಗಾರರಲ್ಲಿ ಒಬ್ಬರನ್ನಾಗಿ ಮಾಡಿತು.

---

## ಎಲ್ರೋ ಕೇಳಿದ ಕಥೆ

### ಕಿರಿದೆಂದು ಕಡೆಗಣಿಸಬಾರದು


ಸೂರೂ ಎಂದೇ ಪ್ರಖ್ಯಾತವಾಗಿರುವ ಕೃ. ಸೂರ್ಯನಾರಾಯಣ ರಾವ್‌ರವರು ಒಬ್ಬರ ಮನೆಯಲ್ಲಿ ಒಂದೆರಡು ದಿವಸ ಉಳಿದು ಕೊಂಡಿದ್ದರು. ಆ ಎರಡೂ ದಿನಗಳು ಹಲವು ವಿಷಯಗಳ ಮೇಲೆ ಚರ್ಚೆ, ತಮಾಷೆ, ಗಂಭೀರ ಸಂವಾದಗಳೊಂದಿಗೆ ಕೂಡಿತ್ತು. ಮನೆ ಮಂದಿಗೆಲ್ಲ ಹೊಸ ಅನುಭವ. ಸೂರೂರವರನ್ನು ಹಲವು ಸ್ಥಾನೀಯ ಗಣ್ಯರು ಭೇಟಿ ಮಾಡಿದ್ದರು. ಅವರ ಕುರಿತಾದ ಗೌರವ ಹೆಚ್ಚಿತು. ಹಾಗೆಯೇ ಅವರ ಮುಂದಿನ ಪ್ರವಾಸಕ್ಕಾಗಿ ಅಲ್ಲಿಂದ ಹೊರಟರು. ಮನೆಯವರಿಗೆ ಒಂದು ರೀತಿಯ ಬೇಸರ. ಭಾರದ ಮನಸ್ಸಿನಿಂದ ಕಾರಿನವರೆಗೆ ಬೀಳ್ಕೊಟ್ಟು ಮನೆಯ ಒಡತಿ “ಆದಷ್ಟು ಬೇಗ ಇನ್ನೊಮ್ಮೆ ಬನ್ನಿ” ಎಂದು ಕೇಳಿಕೊಂಡರು. ಸೂರೂರವರು “ಆಯ್ತಮ್ಮಾ, ಬಂದೇ ಬರುತ್ತೇನೆ” ಎಂದು ಸಂತೋಷದಿಂದ ಹೇಳಿದರು.

ಮುಂದಿನ ಪ್ರವಾಸಕ್ಕೆ ಅಲ್ಲಿಂದ ಹೊರಟರು. ಒಂದೆರಡು ಕಿ.ಮಿ ಹೋಗಿರಬಹುದು “ತುಸು ಕಾರು ನಿಲ್ಲಿಸಪ್ಪಾ” ಎಂದು ಚಾಲಕನಿಗೆ ಸೂಚಿಸಿದರು. “ಯಾಕೆ ಸೂರೂಜಿ? ಏನಾದರು ಮರೆತಿರಾ?” ಎಂದು ಚಾಲಕನು ಕೇಳಿದಕ್ಕೆ “ಏನಿಲ್ಲ, ಆ ಮನೆಯ ಬಳಿ ಹೋಗೋಣ ಹೇಳ್ತೀನಿ” ಎಂದರು. ಕಾರು ಹಿಂದಕ್ಕೆ ತಿರುಗಿಸಿ ಆ ಮನೆಗೆ ವಾಪಸ್ಸು ಬಂದರು. ಅಲ್ಲಿ ಸೂರೂ ರವರು ಅನುಚರ ಪ್ರಬಂಧಕನಿಗೆ “ನೋಡಪ್ಪಾ, ಕೋಣೆಯ ಈ ಭಾಗದ ಕಿಟಕಿಯ ಬಾಗಿಲು ಹಾಕಿಲ್ಲ, ಹೋಗಿ ಹಾಕಿ ಬರುತ್ತೀಯೇನಪ್ಪ?” ಎಂದು ಹೇಳಿದರು. ಅವನು ಕೆಳಗಿಳಿದು ಮನೆಗೆ ಹೋಗಿ ಈ ವಿಷಯ ವಿವರಿಸಿ ಕೋಣೆಯ ಕಿಟಕಿಯ ಬಾಗಿಲು ಹಾಕಲು ಹೋದ. ಮನೆಯವರು ಕಾರಿನ ಕಡೆಗೆ ಬಂದರು. “ನೋಡಮ್ಮಾ, ಆದಷ್ಟು ಬೇಗ ಬನ್ನಿ ಅಂತ ಕರೆದಿರಲ್ಲ, ನಿಮ್ಮ ಸೂಚನೆ ಪಾಲನೆ ಮಾಡಿದ್ದೇನೆ, ಬಂದೇ ಬಿಟ್ಟಿದೀನಿ ನೋಡಿ” ಎಂದು ಸೂರೂ ರವರು ಮಗುವಿನಂತೆ ನಕ್ಕರು. ಹುಡುಗ ಹಿಂತಿರುಗಿ ಬಂದ ಮತ್ತೆ ಪ್ರಯಾಣ ಮುಂದುವರಿಯಿತು.

“ಇಷ್ಟು ದೊಡ್ಡ ವ್ಯಕ್ತಿ ಇಷ್ಟೊಂದು ಸರಳವಾಗಿರಲು ಸಾಧ್ಯವೇ?” ಎಂದು ಮಡದಿ ಗದ್ಗದಿತರಾಗಿ ಪತಿಗೆ ಕೇಳಿದರು. “ತಪ್ಪು, ನೀನು ತಪ್ಪಾಗಿ ಹೇಳುತ್ತಿದ್ದೀಯ! ಇಷ್ಟು ಸರಳವಾಗಿರುವುದರಿಂದಲೇ, ಸಣ್ಣ ಸಣ್ಣ ವಿಷಯಗಳಿಗೂ ಪ್ರಾಮುಖ್ಯ ಕೊಡುವುದರಿಂದಾಗಿಯೇ ಅವರು ಈ ಎತ್ತರಕ್ಕೆ ಏರಿದ್ದಾರೆ” ಎಂದರು. “ಸಣ್ಣ ಸಣ್ಣ ಸಂಗತಿಗಳಿಗೂ ಗಮನ ಕೊಡಬೇಕು. ಆಗ ದೊಡ್ಡ ದೊಡ್ಡ ಕಾರ್ಯಗಳನ್ನು ಸಮರ್ಪಕವಾಗಿ ಮಾಡಲು ಸಾಧ್ಯವಾಗುತ್ತದೆ”–ಸೂರೂ ಅವರು ಸಹಕಾರಿಗಳಿಗೆ ಯಾವಾಗಲು ಹೇಳುತ್ತಿದ್ದ ಮಾತು.

ಮೂಲ: ಉತ್ತುಂಗ

---




## ಆನ್ವೀಕ್ಷಿಕೀ – ಸಮಕಾಲೀನ ಆಖ್ಯಾನಗಳು

**ಪುಸ್ತಕ ಪರಿಚಯ**

**ಸಂಪಾದಕ** : ಸತ್ಯನಾರಾಯಣ ಶಾನಭಾಗ
**ಪ್ರಕಾಶನ** : ವಿಶ್ವ ಸಂವಾದ ಕೇಂದ್ರ ಕರ್ನಾಟಕ
**ಬೆಲೆ** : 150

ಸುತ್ತಲಿನ ವಿದ್ಯಮಾನಗಳ ಕುರಿತು ಜನಮಾನಸದಲ್ಲಿ ಮೂಡುವ ಅಭಿಪ್ರಾಯಗಳು ಆಖ್ಯಾನ (ನೆರೇಟಿವ್) ಗಳಿಂದ ಪ್ರಭಾವಿತವಾಗುತ್ತವೆ. ಅಂತೆಯೇ ವಿದ್ಯಮಾನಗಳು ಆಖ್ಯಾನಗಳು ಹುಟ್ಟಿಕೊಳ್ಳುವುದಕ್ಕೂ ಗಟ್ಟಿಯಾಗುವುದಕ್ಕೂ ಕಾರಣವಾಗುತ್ತವೆ. ಅಂತಹ ಕೆಲವು ಸಮಕಾಲೀನ ವಿಷಯಗಳ ಆಖ್ಯಾನಗಳನ್ನು ಪರಾಮರ್ಶಿಸುವ ಪ್ರಯತ್ನವನ್ನು ‘ಆನ್ವೀಕ್ಷಿಕೀ – ಸಮಕಾಲೀನ ಆಖ್ಯಾನಗಳು’ ಪುಸ್ತಕ ಮಾಡಿದೆ. ಸುರಾಜ್ಯ, ಇಸ್ಲಾಮಿನ ಅರ್ಥೈಸುವಿಕೆ, ಸಾಮಾಜಿಕ ಸಾಮರಸ್ಯ, ಪರಿಸರ ಸಂರಕ್ಷಣೆ, ನವಚಳವಳಿಗಳು, ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ ಈ ವಿಷಯಗಳನ್ನು ಆಖ್ಯಾನಗಳ ಹಿನ್ನೆಲೆಯಲ್ಲಿ ಲೇಖಕರು ಕೂಲಂಕುಷವಾಗಿ ವಿವಿಧ ಮಗ್ಗುಲುಗಳಿಂದ ವಿಶ್ಲೇಷಿಸಿದ್ದಾರೆ. ರೋಹಿತ್ ಚಕ್ರತೀರ್ಥ, ಡಾ. ಶ್ರೀಧರನ್, ಚಂದ್ರಶೇಖರ ಜಹಗೀರ್ದಾರ್, ರೋಹಿಣಾಕ್ಷ ಶಿರ್ಲಾಲು, ಎಸ್. ಗಿರಿಜಾಶಂಕರ ಇವರಗಳು ಬರೆದ ಪ್ರಬಂಧಗಳು ಈ ಸಂಕಲನದಲ್ಲಿದ್ದು, ಆರೆಸ್ಸೆಸ್ ಪ್ರಚಾರಕ ಪ್ರದೀಪ ಮೈಸೂರು ಅವರು ಪುಸ್ತಕಕ್ಕೆ ಮತ್ತು ಆಖ್ಯಾನಗಳ ಪ್ರಪಂಚಕ್ಕೆ ಅರ್ಥವತ್ತಾದ ಪ್ರವೇಶಿಕೆಯನ್ನು ಬರೆದಿದ್ದಾರೆ. ‘ಆನ್ವೀಕ್ಷಿಕೀ’ ಅಂದರೆ ನಿರೂಪಿತ ವಿಷಯದ ಪುನರ್ಮನನ ಎನ್ನುವ ಅರ್ಥವಿದೆ. ಪರಂಪರೆಯಲ್ಲಿ ಈ ಶಬ್ದವು ವಿಶೇಷವಾಗಿ ನ್ಯಾಯ ದರ್ಶನಕ್ಕೆ ಅನ್ವಯವಾಗುತ್ತದೆ. ರಾಜನಾಗತಕ್ಕವನು ಕಲಿಯಬೇಕಾದ ನಾಲ್ಕು ಸಂಗತಿಗಳಲ್ಲಿ ‘ಆನ್ವೀಕ್ಷಿಕೀ’ ಕೂಡ ಒಂದು ಎಂದು ಚಾಣಕ್ಯನ ಅರ್ಥಶಾಸ್ತ್ರದಲ್ಲಿ ಹೇಳಿದೆ. (ವಾರ್ತಾ, ತ್ರಯೀ, ದಂಡನೀತಿ – ಇವು ಉಳಿದ ಮೂರು). ಇದನ್ನು ಮನನ, ಪರಾಮರ್ಶೆ ಎಂಬ ಸಾಮಾನ್ಯ ಅರ್ಥದಲ್ಲಿ ಈ ಪುಸ್ತಕದ ಶೀರ್ಷಿಕೆಯಾಗಿ ಬಳಸಲಾಗಿದೆ.

**ಪುಸ್ತಕಕ್ಕಾಗಿ ಸಂಪರ್ಕಿಸಿ: 8722552497**

ಸಂಪಾದಕೀಯ ಸಹಕಾರ: ವೆಂಕಟೇಶ ಸಂಗನಾಳ, ಶೈಲೇಶ್ ಕುಲಕರ್ಣಿ, ತನ್ಮಯೀ ಪ್ರೇಮಕುಮಾರ್, ಅರುಣ್ ಕಿರಿಮಂಜೇಶ್ವರ, ವಿನಯ್ ಕೃಷ್ಣ

## ಸಾಲುದ್ದದ ಸುದ್ದಿಗಳು

### 1.08 ಲಕ್ಷ ಕೋಟಿ ರೂ. ರಸಗೊಬ್ಬರ ಸಬ್ಸಿಡಿಗೆ ಕೇಂದ್ರ ಸಂಪುಟ ಅಸ್ತು

ರಸಗೊಬ್ಬರಗಳ ಚಿಲ್ಲರೆ ಬೆಲೆಯಲ್ಲಿ ಯಾವುದೇ ಹೆಚ್ಚಳವಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ 2023–24 ಖಾರಿಫ್ ಹಂಗಾಮಿಗೆ 1.08 ಲಕ್ಷ ಕೋಟಿ ರಸಗೊಬ್ಬರ ಸಬ್ಸಿಡಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಖಾರಿಫ್ ಹಂಗಾಮಿಗೆ ಯೂರಿಯಾಕ್ಕೆ 70,000 ಕೋಟಿ ಮತ್ತು ಡಿಎಪಿ ಮತ್ತು ಇತರ ರಸಗೊಬ್ಬರಗಳಿಗೆ 38,000 ಕೋಟಿ ರೂಪಾಯಿ ಸಬ್ಸಿಡಿ ನೀಡಲು ಸಂಪುಟ ತೀರ್ಮಾನಿಸಿದೆ.

### ಮತಾಂತರ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಮುಂದಾದ 'ದಿ ಕೇರಳ ಸ್ಟೋರಿ' ಚಿತ್ರತಂಡ



ಸುದೀಪ್ತೋ ಸೇನ್ ನಿರ್ದೇಶಿಸಿರುವ, ವಿಪುಲ್ ಶಾ ನಿರ್ಮಿಸಿರುವ ಮತ್ತು ಅದಾ ಶರ್ಮಾ ನಾಯಕಿಯಾಗಿ ನಟಿಸಿರುವ "ದಿ ಕೇರಳ ಸ್ಟೋರಿ" ಚಲನಚಿತ್ರ ಮತಾಂತರದ ಕುರಿತಾದ ತನ್ನ ಕಥಾಹಂದರದ ಮೂಲಕ ರಾಷ್ಟ್ರವ್ಯಾಪಿ ಸಂಚಲನವನ್ನು ಮೂಡಿಸುತ್ತಿದೆ. ಇದೀಗ ಚಿತ್ರತಂಡದ ಒಂದು ನಿರ್ಧಾರ ಭಾರೀ ಸುದ್ದಿಯಾಗುತ್ತಿದೆ. 'ದಿ ಕೇರಳ ಸ್ಟೋರಿ' ಸಿನಿಮಾದ ನಿರ್ಮಾಪಕ ವಿಪುಲ್ ಶಾ ಆಶ್ರಮವೊಂದರಲ್ಲಿ ಧಾರ್ಮಿಕ ಮತಾಂತರಕ್ಕೆ ಒಳಗಾದ 300 ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಸಹಾಯ ಮಾಡುವ ಉಪಕ್ರಮವನ್ನು ಘೋಷಿಸಿದ್ದಾರೆ. ಮತ್ತು ಈ ಪ್ರಯತ್ನಕ್ಕೆ 51 ಲಕ್ಷ ರೂ ನೀಡುವ ಭರವಸೆ ನೀಡಿದ್ದಾರೆ.

### ಮುಂಬೈ ದಾಳಿ ಆರೋಪಿಯನ್ನು ಹಸ್ತಾಂತರಿಸಲು ಯುಎಸ್ ಒಪ್ಪಿಗೆ

2008ರ ಮುಂಬೈ ಭಯೋತ್ಪಾದಕ ದಾಳಿಯಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿರುವ ತಹವ್ವುರ್ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಲು ಯುಎಸ್ ನ್ಯಾಯಾಲಯವು ಅನುಮೋದನೆ ನೀಡಿದೆ. ಈ ದಾಳಿಗೆ ಸಂಬಂಧಿಸಿದಂತೆ ಭಾರತದ ಹಸ್ತಾಂತರ ಕೋರಿಕೆಯ ಮೇರೆಗೆ ರಾಣಾನನ್ನು ಯುಎಸ್‌ನಲ್ಲಿ ಬಂಧಿಸಲಾಯಿತು. ಅಮೆರಿಕದ ಲಾಸ್ ಎಂಜಲೀಸ್‌ನಲ್ಲಿರುವ ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ಕೊನೆಯದಾಗಿ ಈ ಪ್ರಕರಣದ ವಿಚಾರಣೆಯನ್ನು ಜೂನ್ 2021ರಲ್ಲಿ ನಡೆಸಲಾಗಿತ್ತು. ಇದೀಗ ರಾಣಾನನ್ನು ಭಾರತಕ್ಕೆ ಒಪ್ಪಿಸಲು ಅನುಮತಿ ನೀಡಿ ಕೋರ್ಟ್ ಆದೇಶ ಮಾಡಿದೆ. ತಹವ್ವುರ್ ರಾಣಾ ಪಾಕಿಸ್ತಾನಿ ಮೂಲದ ಕೆನಡಾದ ಉದ್ಯಮಿ. ಈತ ತನ್ನ ಬಾಲ್ಯದ ಗೆಳೆಯ ಡೇವಿಡ್ ಕೋಲ್ಮನ್ ಹೆಡ್ಲಿ ಮತ್ತು ಇತರರೊಂದಿಗೆ ಸಹಕರಿಸುವ ಮೂಲಕ ಮುಂಬೈನಲ್ಲಿ ಲಷ್ಕರ್ ಭಯೋತ್ಪಾದಕ ದಾಳಿಯ ಯೋಜನೆ ಮತ್ತು ಕಾರ್ಯಗತಗೊಳಿಸುವಿಕೆಯಲ್ಲಿ ಭಾಗವಹಿಸಿದ್ದ ಎಂದು ಭಾರತ ಸರ್ಕಾರ ಆರೋಪಿಸಿದೆ.

### ಜುಲೈನಲ್ಲಿ ಚಂದ್ರಯಾನ–3 ಮಿಷನ್ ಪ್ರಾರಂಭ

ಜುಲೈ ಎರಡನೇ ವಾರದಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಚಂದ್ರಯಾನ–3 ಮಿಷನ್ ಅನ್ನು ಪ್ರಾರಂಭಿಸಲು ಆಶಿಸುತ್ತಿದೆ. ಚಂದ್ರನ ದಕ್ಷಿಣ ಧ್ರುವದಲ್ಲಿ ಬಾಹ್ಯಾಕಾಶ ನೌಕೆಯನ್ನು ಯಶಸ್ವಿಯಾಗಿ ಇಳಿಸಲು ಮತ್ತು ದಾರಿಯುದ್ದಕ್ಕೂ ನಿರ್ಣಾಯಕ ತಂತ್ರಜ್ಞಾನಗಳನ್ನು ಪ್ರದರ್ಶಿಸಲು ಗುರಿಯನ್ನು ಹೊಂದಿದೆ. ಚಂದ್ರಯಾನ–3 ಚಂದ್ರನ ಗುಣಲಕ್ಷಣಗಳಾದ ಉಷ್ಣ, ಭೂಕಂಪ ಮತ್ತು ಪ್ಲಾಸ್ಮಾ ಗುಣಲಕ್ಷಣಗಳನ್ನು ಅಧ್ಯಯನ ಮಾಡುತ್ತದೆ. ಇದು ಲ್ಯಾಂಡಿಂಗ್ ಪ್ರದೇಶಕ್ಕೆ ಹತ್ತಿರವಿರುವ ಅಂಶಗಳನ್ನು ಸಹ ವಿಶ್ಲೇಷಿಸುತ್ತದೆ. ಭಾರತದ ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆಯ ಹಿರಿಯ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದಂತೆ ಜುಲೈ ಎರಡನೇ ವಾರದಲ್ಲಿ ಈ ಮಿಷನ್ ಅನ್ನು ಪ್ರಾರಂಭಿಸಲು ನಿರ್ಧರಿಸಲಾಗಿದೆ.

### 1,100 ಹೊಸ ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸಲಿದೆ ಕೇಂದ್ರ

ಪ್ರಧಾನಮಂತ್ರಿ ನರೇಂದ್ರ ಮೋದಿಯವರ 'ಸಹಕಾರ್ ಸೇ ಸಮೃದ್ಧಿ'ಯ ದೃಷ್ಟಿಕೋನವನ್ನು ಸಾಕಾರಗೊಳಿಸುವ ಸಲುವಾಗಿ, ಸಹಕಾರಿ ವಲಯದಲ್ಲಿ 1,100 ಹೊಸ ರೈತ ಉತ್ಪಾದಕ ಸಂಸ್ಥೆಗಳನ್ನು (ಎಫ್‌ಪಿಒ) ರಚಿಸುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಎಫ್‌ಪಿಒಗಳ ಯೋಜನೆಯಡಿಯಲ್ಲಿ ಈ ಹೆಚ್ಚುವರಿ 1100 ಎಫ್‌ಪಿಒಗಳನ್ನು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮಕ್ಕೆ (ಎನ್‌ಸಿಡಿಸಿ) ಹಂಚಲಾಗಿದೆ. ಎಫ್‌ಪಿಒ ಯೋಜನೆಯಡಿ ಪ್ರತಿ ಎಫ್‌ಪಿಒಗೆ 33 ಲಕ್ಷ ರೂಪಾಯಿಗಳ ಆರ್ಥಿಕ ನೆರವು ನೀಡಲಾಗುತ್ತದೆ. ಇದಲ್ಲದೆ, ಕ್ಲಸ್ಟರ್ ಆಧಾರಿತ ವ್ಯಾಪಾರ ಸಂಸ್ಥೆಗಳಿಗೆ ಪ್ರತಿ FPO 25 ಲಕ್ಷ ರೂಪಾಯಿಗಳ ಆರ್ಥಿಕ ಸಹಾಯವನ್ನು ನೀಡಲಾಗುತ್ತದೆ. ಇದರಿಂದಾಗಿ ಪ್ರಾಥಮಿಕ ಕೃಷಿ ಸಾಲ ಸೊಸೈಟಿಗಳು ಹೆಚ್ಚಿನ ಆದಾಯವನ್ನು ಉತ್ಪಾದಿಸುವ ಚಟುವಟಿಕೆಗಳನ್ನು ಒಳಗೊಂಡಂತೆ ಇತರ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ ಎಂದು ಸಚಿವಾಲಯ ಹೇಳಿದೆ.

### ಸಂಸತ್ತಿನ ನೂತನ ಕಟ್ಟಡ ಲೋಕಾರ್ಪಣೆ



ಪ್ರಧಾನಿ ನರೇಂದ್ರ ಮೋದಿ ಅವರು ಮೇ 28ರಂದು ರಾಷ್ಟ್ರ ರಾಜಧಾನಿಯಲ್ಲಿ ನೂತನವಾಗಿ ನಿರ್ಮಿಸಿರುವ ಸಂಸತ್ ಭವನವನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ಹೊಸ ಸಂಸತ್ತಿನ ಕಟ್ಟಡವು ಸ್ವಾವಲಂಬಿ ಭಾರತದ ಚೈತನ್ಯದ ಸಂಕೇತವಾಗಿದೆ. ಪ್ರಸ್ತುತ ಇರುವ ಸಂಸತ್ತಿನ ಕಟ್ಟಡದ ನಿರ್ಮಾಣವು 1927 ರಲ್ಲಿ ಪೂರ್ಣಗೊಂಡಿದ್ದು, ಸುಮಾರು 100 ವರ್ಷಗಳಷ್ಟು ಹಳೆಯದಾಗಿದೆ. ಆದರೆ ಈ ಕಟ್ಟಡದಲ್ಲಿ ಅಗತ್ಯಕ್ಕೆ ತಕ್ಕಂತೆ ಜಾಗದ ಕೊರತೆ ಎದುರಾಗಿತ್ತು. ಉಭಯ ಸದನಗಳಲ್ಲಿ ಸಂಸದರ ಆಸನಕ್ಕೆ ಅನುಕೂಲಕರ ವ್ಯವಸ್ಥೆ ಇಲ್ಲದಿರುವುದು ಸದಸ್ಯರ ಕಾರ್ಯದಕ್ಷತೆಯ ಮೇಲೆ ಪರಿಣಾಮ ಬೀರಿದೆ. ಸಮಸ್ಯೆಗಳನ್ನು ಪರಿಗಣಿಸಿ, ಲೋಕಸಭೆ ಮತ್ತು ರಾಜ್ಯಸಭೆ ಎರಡೂ ಸಂಸತ್ತಿಗೆ ಹೊಸ ಕಟ್ಟಡವನ್ನು ನಿರ್ಮಿಸಲು ಸರ್ಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸಿದವು. ಪರಿಣಾಮವಾಗಿ, 10 ಡಿಸೆಂಬರ್ 2020 ರಂದು, ಸಂಸತ್ತಿನ ಹೊಸ ಕಟ್ಟಡದ ಅಡಿಪಾಯವನ್ನು ಪ್ರಧಾನಿ ನರೇಂದ್ರ ಮೋದಿಯವರು ಹಾಕಿದರು. ನೂತನವಾಗಿ ನಿರ್ಮಾಣವಾಗಿರುವ ಸಂಸತ್ ಭವನವನ್ನು ಗುಣಮಟ್ಟದ ನಿರ್ಮಾಣದೊಂದಿಗೆ ದಾಖಲೆ ಸಮಯದಲ್ಲಿ ನಿರ್ಮಿಸಲಾಗಿದೆ.

# ಸಂವಾದಾತ್ಮಕ ಕಲಿಕೆಯನ್ನು ಪ್ರೋತ್ಸಾಹಿಸಲು 'ಶಿಕ್ಷಾ' ಕಂಡುಹಿಡಿದ ಶಿಕ್ಷಕನ ಯಶೋಗಾಥೆ

ಪ್ರೇರಣಾ

ತನ್ನ ಗ್ರಾಮದ ವಿದ್ಯಾರ್ಥಿಗಳಿಗೆ ದೊರೆಯುವ ಶಿಕ್ಷಣ ಹೆಚ್ಚು ಸಂವಾದಾತ್ಮಕವಾಗಿರಬೇಕು ಎಂದು ಬಯಸಿದ ಶಿಕ್ಷಕನೊಬ್ಬ ತನ್ನ ವಿನೂತನ ಕಲ್ಪನೆಯ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಗಮನ ಸೆಳೆಯುತ್ತಿದ್ದಾರೆ. 'ಶಿಕ್ಷಾ' ಎಂಬ ಹುಮನಾಯ್ಡ್ ರೋಬೋಟ್‌ನನ್ನು ನಿರ್ಮಿಸಿ ಅದರ ಮೂಲಕ ನಾಲ್ಕನೇ ತರಗತಿಯೊಳಗಿನ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಬೋಧಿಸುವ ವಿಶಿಷ್ಟ ಪ್ರಯತ್ನವೊಂದನ್ನು ಮಾಡಿದ್ದಾರೆ.

ನೀಲಿ ಬಣ್ಣದ ಸಮವಸ್ತ್ರ ಧರಿಸಿ, ಶಾಲೆಗೆ ಹೋಗುವ ವಿದ್ಯಾರ್ಥಿಗಳಂತೆಯೇ ಸಿಂಗಾರಗೊಂಡ 'ಶಿಕ್ಷಾ' ಹೆಸರಿನ ಹುಮನಾಯ್ಡ್ ರೋಬೋಟ್ ವಿದ್ಯಾರ್ಥಿಗಳನ್ನು ಹೋಲುತ್ತದೆ. ಶಿಕ್ಷಾ ರೈಮರ್‌ಗಳಿಂದ ಹಿಡಿದು, ವಾರಗಳ ದಿನಗಳು, ವಿಭಿನ್ನ ಆಕಾರಗಳ ಹೆಸರುಗಳು, ಹಾಗೂ ಇನ್ನೂ ಹೆಚ್ಚಿನ ಪಾಠಗಳನ್ನು ಹೇಳಲು ಪ್ರಾರಂಭಿಸಿದಾಗ ಪ್ರತಿಯೊಬ್ಬ ವಿದ್ಯಾರ್ಥಿಯ ದೃಷ್ಟಿಯಲ್ಲಿ ಆಶ್ಚರ್ಯದ ಭಾವ ಮನೆ ಮಾಡಿರುತ್ತದೆ.

ಶಿಕ್ಷಾ 30 ವರ್ಷದ ಅಕ್ಷಯ್ ಮಶೇಲ್ಕರ್ ಅವರ ಆವಿಷ್ಕಾರ. ಕಲಿಕೆಯನ್ನು ವಿನೋದ ಮತ್ತು ಸಂವಾದಾತ್ಮಕವಾಗಿಸುವ ಗುರಿಯ ಪ್ರತಿಫಲ ಇದಾಗಿದೆ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಎಂಬ ಹಳ್ಳಿಯಲ್ಲಿ ಹುಟ್ಟಿ ಬೆಳೆದ ಅಕ್ಷಯ್ ತನ್ನ ತಾಯಿಯ ಹಾದಿಯನ್ನು ಅನುಸರಿಸಿ ಭೌತಶಾಸ್ತ್ರದಲ್ಲಿ ಪದವಿ ಮುಗಿಸಿದ ನಂತರ ಶಿರಸಿಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು. ಶಿಕ್ಷಣ ವ್ಯವಸ್ಥೆಯಲ್ಲಿ ತರಬೇಕಾದ ಬದಲಾವಣೆಗಳ ಕುರಿತು ಅನೇಕ ಆಲೋಚನೆಗಳಿದ್ದರೂ ಅವುಗಳನ್ನು ಅನುಷ್ಠಾನಕ್ಕೆ ತರಲು ಸಮಯ ಸಿಗಲಿಲ್ಲ. ಆದರೆ ಕೋವಿಡ್‌ನಿಂದಾಗಿ ಶಿಕ್ಷಣ ಕ್ಷೇತ್ರವು ಆನ್‌ಲೈನ್‌ಗೆ ತೆರೆದುಕೊಂಡಾಗ ಅವರ ಆಲೋಚನೆಗಳ ಮೇಲೆ ಕೆಲಸ ಮಾಡಲು ಪರಿಪೂರ್ಣ ಅವಕಾಶವನ್ನು ಕಂಡುಕೊಂಡರು. ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ಟೈರ್–2 ಮತ್ತು ಟೈರ್–3 ನಗರಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆಧುನಿಕ ಮತ್ತು ವೈಜ್ಞಾನಿಕ ಬೋಧನಾ ವಿಧಾನಗಳ ಕೊರತೆಯನ್ನು ಕಂಡುಕೊಂಡರು. ಹಳ್ಳಿಯ ಶಾಲೆಗಳಿಗೆ ಹಲವಾರು ಬಾರಿ ಭೇಟಿ ನೀಡಿದಾಗ, ಶಿಕ್ಷಕರು ಕಲಿಸಲು ಇನ್ನೂ ಚಾರ್ಟ್‌ಗಳು ಮತ್ತು ಬ್ಲಾಕ್‌ಗಳನ್ನು ಬಳಸುತ್ತಿರುವುದನ್ನು ಗಮನಿಸಿದರು. ತಂತ್ರಜ್ಞಾನದ ಯುಗಕ್ಕೆ ಕಾಲಿಟ್ಟು ಸ್ಮಾರ್ಟ್ ಬೋರ್ಡ್‌ಗಳನ್ನು ನಗರಗಳ ಶಿಕ್ಷಣ ಸಂಸ್ಥೆಗಳು ಸಮರ್ಥವಾಗಿ ಬಳಸಿಕೊಳ್ಳುತ್ತಿರುವಾಗ ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ತನ್ನ ಕಲಿಕೆಯ ದಿನಗಳಲ್ಲಿ ಬಳಸುತ್ತಿದ್ದ ತಂತ್ರಗಳನ್ನೇ ಬಳಸಲಾಗುತ್ತಿದೆ ಎನ್ನುವುದನ್ನು ಅರಿತರು. ಗ್ರಾಮೀಣ ಶಾಲೆಗಳ ಈ ಸ್ಥಿತಿಯನ್ನು ಸುಧಾರಿಸಲು ಸುಲಭವಾದ ಮತ್ತು ಕಡಿಮೆ ಖರ್ಚಿನಲ್ಲಾಗಬಹುದಾದ ಪರಿಹಾರಗಳನ್ನು ಕಂಡುಹಿಡಿಯಲು ಹೆಚ್ಚು ಆಸಕ್ತಿ ವಹಿಸಿದ ಅಕ್ಷಯ್‌ರವರ ಒಂದೂವರೆ ವರ್ಷದ ಪ್ರತಿಫಲವಾಗಿ 2022ರಲ್ಲಿ, 'ಶಿಕ್ಷಾ' – 4 ನೇ ತರಗತಿಯವರೆಗೆ ಪ್ರಾದೇಶಿಕ ಭಾಷೆಗಳಲ್ಲಿ ಕಲಿಸಲು ಸಾಮರ್ಥ್ಯವಿರುವ ಹುಮನಾಯ್ಡ್ ರೋಬೋಟ್ ಸಿದ್ಧವಾಯಿತು. ರೋಬೋಟ್ ನಿರ್ಮಿಸಲು ಸುಮಾರು 2 ಲಕ್ಷ ರೂ.ಗಳ ಖರ್ಚಾಯಿತು, ಅದನ್ನು ಅವರು ತಮ್ಮ ಸ್ವಂತ ಉಳಿತಾಯದಿಂದ ತೆಗೆದುಕೊಂಡರು.

**ಉತ್ತರ ಕನ್ನಡ ಜಿಲ್ಲೆಯ 25 ಶಾಲೆಗಳಿಗೆ ರೋಬೋಟ್ ಭೇಟಿ ನೀಡಿದೆ. ಇಲ್ಲಿಯವರೆಗೆ, ಶಿಕ್ಷಾ 4 ನೇ ತರಗತಿಯವರೆಗೆ ಕಲಿಸಬಹುದು ಮತ್ತು ಬೋರ್ಡ್‌ಗಳಲ್ಲಿ ಪಠ್ಯಕ್ರಮದ ಸೌಕರ್ಯಗಳನ್ನು ಹೊಂದಿದೆ.**

ರೋಬೋಟ್ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಅಕ್ಷಯ್ ಹೀಗೆ ಹೇಳುತ್ತಾರೆ, "ರೋಬೋಟ್ ಎರಡು ಮುಖ್ಯ ಕಾರ್ಡ್‌ಗಳನ್ನು ಹೊಂದಿದೆ – ಅದನ್ನು ಅನ್‌ಲಾಕ್ ಮಾಡುವ ಮಾಸ್ಟರ್ ಕಾರ್ಡ್ ಮತ್ತು ಬಯಸಿದ ಪ್ರೋಗ್ರಾಂ ಅನ್ನು ಪ್ರಾರಂಭಿಸಲು ಸಾಮಾನ್ಯ ಕಾರ್ಡ್. ಶಿಕ್ಷಕರು ಅದನ್ನು ಪ್ರಾರಂಭಿಸಲು ಶಿಕ್ಷಾ ಕೈಯಲ್ಲಿ



ಮಾಸ್ಟರ್ ಕಾರ್ಡ್ ಅನ್ನು ಹಾಕಬೇಕು ಮತ್ತು ನಂತರ ಅವರು ವಿವಿಧ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಪ್ರೋಗ್ರಾಂ ಕಾರ್ಡ್‌ಗಳನ್ನು ಬಳಸಬಹುದು. ಶಿಕ್ಷಾ ಕಾರ್ಡ್ ತೆಗೆದುಕೊಳ್ಳಲು ತನ್ನ ತೋಳುಗಳನ್ನು ಚಲಿಸುತ್ತಾಳೆ ಮತ್ತು ಒಮ್ಮೆ ಸ್ಕ್ಯಾನ್ ಮಾಡಿದ ನಂತರ ಅದನ್ನು ಹಿಂತಿರುಗಿಸುತ್ತಾಳೆ" ಎಂದು ಅವರು ಹೇಳುತ್ತಾರೆ.

**"ಮಕ್ಕಳು ಶಿಕ್ಷಾಳನ್ನು ಮೊದಲ ಬಾರಿಗೆ ನೋಡಿದಾಗ, ಅವರ ಕಣ್ಣುಗಳಲ್ಲಿ ಮಿಂಚನ್ನು ನಾನು ನೋಡಿದೆ. ಅವರು ಕುತೂಹಲ, ಆಶ್ಚರ್ಯ ಮತ್ತು ಉತ್ಸುಕರಾಗಿದ್ದರು. ಶಿಕ್ಷಾ ಮಾಡುವ ಹಿಂದಿನ ನನ್ನ ಉದ್ದೇಶವು ತರಗತಿಯಲ್ಲಿ ತಂತ್ರಜ್ಞಾನವನ್ನು ಪರಿಚಯಿಸುವುದು ಮಾತ್ರವಲ್ಲದೆ ರೋಬೋಟ್‌ಗಳನ್ನು ತಯಾರಿಸಲು ಮಕ್ಕಳನ್ನು ಪ್ರೋತ್ಸಾಹಿಸುವುದಾಗಿದೆ" – ಅಕ್ಷಯ್**

ಮಕ್ಕಳಿಗೆ ರೋಬೋಟ್ ನಿರ್ಮಾಣದ ಆಸಕ್ತಿ ಹೆಚ್ಚಿಸುವ ಆಲೋಚನೆಯನ್ನು ಇಟ್ಟುಕೊಂಡು, ಅಕ್ಷಯ್ ಅವರು ಸಂಶೋಧನಾ ಕೇಂದ್ರವನ್ನು ಸಹ ತೆರೆದರು. ಯುವ ರೊಬೊಟಿಕ್ಸ್ ಉತ್ಸಾಹಿಗಳು ಇಲ್ಲಿ ಉಚಿತವಾಗಿ ಬಂದು ಕಲಿಯುವ ಅವಕಾಶವಿದೆ. ಅವರ ಸಂಶೋಧನಾ ಕೇಂದ್ರದ ಕುರಿತು ತಿಳಿದುಕೊಳ್ಳಲು ಮತ್ತು ಅವರ ಕಾರ್ಯದ ಭಾಗವಾಗಲು 7483276508ಗೆ ಕರೆ ಮಾಡಬಹುದು.

*ಮೂಲ: ದಿ ಬೆಟರ್ ಇಂಡಿಯಾ. ಕಾಂ*

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th MAY 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 01-06-2023



## ನಾಗ್ಪುರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ತೃತೀಯ ವರ್ಷ ಸಂಘ ಶಿಕ್ಷ ವರ್ಗ ಪ್ರಾರಂಭ

ನಾಗ್ಪುರ: ರಾಷ್ಟ್ರೀಯ ಸ್ವಯಂಸೇವಕ ಸಂಘದ ತೃತೀಯ ವರ್ಷ ಸಂಘ ಶಿಕ್ಷಾ ವರ್ಗ ನಾಗ್ಪುರದ ರೇಶಿಂಬಾಗ್‌ನಲ್ಲಿರುವ ಡಾ. ಹೆಡಗೇವಾರ್ ಸ್ಮೃತಿ ಭವನದ ಮಹರ್ಷಿ ವ್ಯಾಸ ಸಭಾಗೃಹದಲ್ಲಿ ಪ್ರಾರಂಭವಾಯಿತು. ದೀಪಪ್ರಜ್ವಲನೆ ಮತ್ತು ಭಾರತ ಮಾತಾ ಪೂಜನ್ ಕಾರ್ಯಕ್ರಮದ ನಂತರ ಮಾತನಾಡಿದ ಸಂಘ ಶಿಕ್ಷಾ ವರ್ಗದ ಪಾಲಕ ಅಧಿಕಾರಿ ಮತ್ತು ಸಹಸರಕಾರ್ಯವಾಹ ರಾಮದತ್ತ್ ಪ್ರಯತ್ನದ ಹಾದಿಯಲ್ಲಿನ ಶ್ರಮದ ಮೂಲಕ ಆನಂದವನ್ನು ಆಸ್ವಾದಿಸುವ ಭಾವವನ್ನು ಸಾಧನಾ ಎಂದು ಕರೆಯಲಾಗುತ್ತದೆ. ಸಂಘ ಶಿಕ್ಷಾ ವರ್ಗ ಅಂತಹದೊಂದು ಸಾಧನಾ ಎಂದು ಹೇಳಿದರು.

ರೈತ ತನ್ನ ಭೂಮಿಯಲ್ಲಿ ಬೀಜವನ್ನು ಬಿತ್ತುವ ಹಾಗೆ ಸಂಘ ಶಿಕ್ಷಾ ವರ್ಗದಲ್ಲಿ ಸ್ವಯಂಸೇವಕರಿಗೆ ಸಂಸ್ಕಾರವನ್ನು ಬಿತ್ತುತ್ತದೆ. ಈ ಪ್ರಕ್ರಿಯೆ ಸಂಘ ಕಾರ್ಯದಲ್ಲಿ ಪ್ರಶಿಕ್ಷಣದ ಮಹತ್ವವನ್ನು ಸಾರುತ್ತದೆ. ರೇಶಿಂಬಾಗ್ ಡಾ.ಹೆಡಗೇವಾರ್ ಮತ್ತು ಗುರೂಜಿಯವರ ತಪೋಭೂಮಿ. ಈ ಪುಣ್ಯಭೂಮಿಗೆ ಭೇಟಿ ನೀಡಿದ ಪ್ರತಿ ಸ್ವಯಂಸೇವಕನಿಗೂ ರಾಷ್ಟ್ರ ಮೊದಲು ಎಂಬ ಭಾವ, ಸ್ವಾಭಿಮಾನ, ಪ್ರಾಮಾಣಿಕತೆ, ರಾಷ್ಟ್ರಭಕ್ತಿ, ಶಿಸ್ತು, ಬಂಧುತ್ವ ಮುಂತಾದ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಅವಕಾಶ ದೊರೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಸಂಘ ಶಿಕ್ಷಾ ವರ್ಗದಲ್ಲಿ ಭಾಗವಹಿಸಿದ ಶಿಕ್ಷಾರ್ಥಿಗಳಲ್ಲಿ ವರ್ಗದಲ್ಲಿರುವ ಪ್ರತಿ ಪ್ರಾಂತದ ಕನಿಷ್ಠ ಇಬ್ಬರು ಶಿಕ್ಷಾರ್ಥಿಗಳನ್ನು ಪರಿಚಯ ಮಾಡಿಕೊಂಡು ಅವರ ಪ್ರಾದೇಶಿಕ ಸಮಸ್ಯೆಗಳ ಕುರಿತು ಅರಿತುಕೊಳ್ಳುವ ಪ್ರಯತ್ನ ಮಾಡಬೇಕು. ಸಂಘದ ಸ್ವಯಂಸೇವಕರು ಕೇವಲ ಸವಾಲುಗಳ ಕುರಿತು ಚರ್ಚಿಸದೇ, ಅದಕ್ಕೆ ಪರಿಹಾರವನ್ನು ನೀಡುವವರಾಗಬೇಕು ಎಂದು ಅಪೇಕ್ಷಿಸಿದರು.

ಸ್ವಯಂಸೇವಕರು ಸಂಘದ ತತ್ತ್ವವನ್ನು ಮತ್ತು ಸಾಮೂಹಿಕ ಒಪ್ಪಂದದೊಂದಿಗೆ ವೈಯಕ್ತಿಕ ಅಭಿಪ್ರಾಯಗಳನ್ನು ಸಮೀಕರಿಸುವ




ಇಚ್ಛೆಯನ್ನು ಗ್ರಹಿಸುವಂತವರಾಗಬೇಕು. ಸ್ವಯಂಸ್ವೇವಕರಲ್ಲಿ ಈ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು ಪ್ರತಿ ಸಂಘಟನೆಯ ಸದ್ಗುಣವಾಗಿರುತ್ತದೆ ಎಂದು ನುಡಿದರು.

ವರ್ಗದ ಶಿಕ್ಷಾರ್ಥಿಗಳು ಸಮಾಜಕ್ಕಾಗಿ ದುಡಿಯುವುದಕ್ಕಾಗಿ ಸದಾ ಮುಂಚೂಣಿಯಲ್ಲಿರಬೇಕು. ಶೀಘ್ರದಲ್ಲೇ ರಾಷ್ಟ್ರೀಯ ಸ್ವಯಂಸೇವಕ ಸಂಘ ತನ್ನ ಶತಮಾನೋತ್ಸವವನ್ನು ಆಚರಿಸಲಿದೆ. ಈ ಸಂದರ್ಭದಲ್ಲಿ ಸ್ವಯಂಸೇವಕರು ತಮ್ಮ ಕರ್ತವ್ಯವನ್ನು ಅರಿತು ಸಂಘ ಕಾರ್ಯವನ್ನು ವಿವಿಧ ಆಯಾಮಗಳಲ್ಲಿ ವಿಸ್ತರಿಸುವ ಮತ್ತು ಸಂಘ ಹಾಗೂ ಸಮಾಜ ಒಂದೇ ಆಗುವವರೆಗೂ ಶ್ರಮವಹಿಸಬೇಕು ಎಂದು ನುಡಿದರು.

ವೇದಿಕೆಯಲ್ಲಿ ಅಖಿಲ ಭಾರತೀಯ ಸಹಸರಕಾರ್ಯವಾಹ ಕೆ.ಸಿ.ಮುಕುಂದ, ಅವಧ್ ಪ್ರಾಂತದ ಸಂಘಚಾಲಕ ಹಾಗೂ ವರ್ಗದ ವರ್ಗ ಸರ್ವಾಧಿಕಾರಿ ಕೃಷ್ಣ ಮೋಹನ ಉಪಸ್ಥಿತರಿದ್ದರು. ಈ ಬಾರಿಯ ಸಂಘ ಶಿಕ್ಷಾ ವರ್ಗದಲ್ಲಿ ರಾಷ್ಟ್ರದ ಎಲ್ಲಾ ಪ್ರಾಂತವನ್ನು ಪ್ರತಿನಿಧಿಸಿ 682 ಮಂದಿ ಶಿಕ್ಷಾರ್ಥಿಗಳು ಭಾಗವಹಿಸಿದರು.

ಸಂಘ ಶಿಕ್ಷಾ ವರ್ಗದ ಪಥಸಂಚಲನ ಮೇ 21ರಂದು ನಡೆಯಿತು. ಜೂನ್ 1 ರಂದು ಸಮಾರೋಪ ಸಮಾರಂಭ ನಡೆಯಲಿದೆ.

## ಜ್ಯೇಷ್ಠ ಪ್ರಚಾರಕ ಹರಿಭಾವು ವಝೆ ನಿಧನ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಜ್ಯೇಷ್ಠ ಪ್ರಚಾರಕರಾಗಿದ್ದ ಹರಿಭಾವು ವಝೆ (92) ಅವರು ಮೇ 13 ಬೆಳಗ್ಗೆ 10:20 ಗಂಟೆಗೆ ಬೆಳಗಾವಿಯಲ್ಲಿ ನಿಧನರಾದರು.

ಕುರುಂದವಾಡದ ರಾಜ ಬಾಪುಸಾಹೇಬ ಪಟವರ್ಧನರಲ್ಲಿ ಸಿನಿಯರ್ ಕ್ಲರ್ಕ್ ಆಗಿದ್ದ ಚಿಂತಾಮಣರಾವ್ ವಝೆ ಹಾಗೂ ರಾಧಾಬಾಯಿ ದಂಪತಿಗಳಿಗೆ 1932 ಅಕ್ಟೋಬರ್ 4ರಂದು ಹರಿಭಾವು ಅವರು ಜನಿಸಿದರು. ಹರಿಭಾವು ಅವರೂ ಸೇರಿ 3 ಸಹೋದರರು, 3 ಸಹೋದರಿಯರ ತುಂಬು ಕುಟುಂಬ ಅವರದ್ದು. ತಮ್ಮ 4ನೇ ತರಗತಿಯಲ್ಲಿದ್ದಾಗ ನಾರಬಾ ಪಾಟೀಲ ಅವರ ಮೂಲಕ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಭಾಜಿ ಶಾಖೆಯ ಸ್ವಯಂಸೇವಕರಾದರು.

ಕ್ರಮೇಣ ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿ, ಶಾಖೆಯ ಶಿಕ್ಷಕ, ಮುಖ್ಯ ಶಿಕ್ಷಕ, ಕಾರ್ಯವಾಹ, ಬೆಳಗಾವಿ ನಗರ ಕಾರ್ಯವಾಹ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ತಮ್ಮ ಎಮ್. ಎಸ್ಸಿ ಪದವಿ ನಂತರ ಸಂಘದ ಪ್ರಚಾರಕರಾಗಿ ಹೊರಟರು. ಯಾದವರಾವ ಜೋಶಿ ಅವರ ಮಾರ್ಗದರ್ಶನ ಹಾಗೂ ಸಹವಾಸ ಹರಿಭಾವು ಅವರಿಗೆ ನಿರಂತರವಾಗಿತ್ತು. ಮಂಗಳೂರು ನಗರ ಪ್ರಚಾರಕ, ಶಿವಮೊಗ್ಗ ಜಿಲ್ಲಾ ಪ್ರಚಾರಕ, ನಂತರ ಮೈಸೂರ ವಿಭಾಗ ಪ್ರಚಾರಕರಾಗಿ ಕಾರ್ಯ ನಿರ್ವಹಿಸಿದ್ದರು.

1982ರಲ್ಲಿ ಅಖಿಲ ಭಾರತೀಯ ಇತಿಹಾಸ ಸಂಕಲನ ಸಮಿತಿಯ ಪ್ರಮುಖರಾಗಿ, ಗುಪ್ತಗಾಮಿನಿಯಾದ ಸರಸ್ವತಿ ನದಿಯ ಶೋಧ ಕಾರ್ಯದಲ್ಲಿ ಇವರ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು. ಈ ಕುರಿತು 14 ಭಾಷೆಗಳಲ್ಲಿ 3 ರೀತಿಯ ಪುಸ್ತಕಗಳನ್ನೂ ಸಹ ಪ್ರಕಟಿಸಿದ್ದರು. ಪಾರ್ಶ್ವವಾಯುಗೆ ತುತ್ತಾಗಿ 5 ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಹರಿಭಾವು ಅವರು ಶನಿವಾರ ಇಹಲೋಕ ತ್ಯಜಿಸಿದರು.

## ಭಾರತ ಶಕ್ತಿಯಿಂದ ವಿಶ್ವಕಲ್ಯಾಣ ಮಾಡಲು ಸಾಧ್ಯ: ಪಟ್ಟಾಭಿರಾಮ್

**ಮಂಡ್ಯ:** ರಾಷ್ಟ್ರೀಯ ಸ್ವಯಂಸೇವಕ ಸಂಘ ಕರ್ನಾಟಕ ದಕ್ಷಿಣ ಪ್ರಾಂತದ 2023ರ ಪ್ರಥಮ ವರ್ಷ ಸಂಘಶಿಕ್ಷಾ ವರ್ಗವು ಮಂಡ್ಯದ ಕೊಮ್ಮೇರಹಳ್ಳಿಯಲ್ಲಿರುವ ವಿಶ್ವಮಾನವ ವಿದ್ಯಾಸಂಸ್ಥೆಯಲ್ಲಿ ಸಂಪನ್ನಗೊಂಡಿತು. ವೇದಿಕೆಯಲ್ಲಿ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟಿನ ಗೌರವ ಕಾರ್ಯದರ್ಶಿ ಪುರುಷೋತ್ತಮಾನಂದ ನಾಥ ಸ್ವಾಮೀಜಿಯವರು, ಸಿದ್ಧಲಿಂಗೇಶ್ವರ ಆಶ್ರಮದ ಶಿವಾನಂದ ಪುರಿ ಸ್ವಾಮೀಜಿಯವರು, ವಿಶ್ರಾಂತ ನ್ಯಾಯಾಧೀಶರಾದ ಕೆ. ನಿಂಗೇಗೌಡ, ಪ್ರೊ.ಸ್ವಾಮೀಗೌಡ ಉಪಸ್ಥಿತರಿದ್ದರು. ಪ್ರಾಂತ ಸಹಕಾರ್ಯವಾಹರಾದ ಪಟ್ಟಾಭಿರಾಮ್ ಬೌದ್ಧಿಕ್ ಮಾಡಿದರು.

ನಿಂಗೇಗೌಡರು ಮಾತನಾಡುತ್ತಾ ಡಾ.ಹೆಡಗೇವಾರರ ಸಂಕಲ್ಪ ಸಂಘಟಿತ ಸರಳ ಜೀವನ, ಸಚ್ಚಾರಿತ್ರ್ಯ, ಉನ್ನತ ಧ್ಯೇಯ ಇರುವ ಸ್ವಯಂಸೇವಕರ ನಿರ್ಮಾಣ ಎನ್ನುತ್ತಾ; ಒಡಕಿಲ್ಲದೇ ತೊಡಕಿಲ್ಲದೇ ನಿರಂತರ ನಡೆಯುತ್ತಿರುವುದೇ ವಿಶೇಷ, ನಿಸ್ವಾರ್ಥ ಇದರ ವೈಶಿಷ್ಟ್ಯ ಎಂದರು.



ಕಾರ್ಯಕ್ರಮದಲ್ಲಿ ಪಟ್ಟಾಭಿರಾಮ ಅವರು ಮಾತನಾಡಿ ಸಂಘ ಕಾರ್ಯವನ್ನು ಸಾರ್ವಜನಿಕರಿಗೆ ಪ್ರದರ್ಶಿಸಿ ಅವರೆಲ್ಲರೂ ಸಂಘಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕೆಂಬ ಅಪೇಕ್ಷೆ ಇದೆ ಎನ್ನುತ್ತಾ ಸಂಘದ ಸ್ಥಾಪನೆಯ ಉದ್ದೇಶ ಮತ್ತು ಸಂಸ್ಥಾಪಕ ಡಾ.ಹೆಡಗೇವಾರರ ದೃಷ್ಟಿಕೋನವನ್ನು ವ್ಯಕ್ತಪಡಿಸಿದರು. ದಾಸ್ಯಕ್ಕೆ ಕಾರಣವಾದ ಹಿಂದು ಸಮಾಜದ ಅಸಂಘಟಿತ ಸ್ಥಿತಿ ಮತ್ತು ಆತ್ಮ ವಿಸ್ಮೃತಿಯ ಸ್ಥಿತಿಗಳನ್ನು ವಿವರಿಸಿದರು.

ಧರ್ಮ ಎಂದರೆ ಎಲ್ಲವನ್ನೂ ಮತ್ತು ಎಲ್ಲರನ್ನೂ ಒಳಗೊಳ್ಳುವುದು. ಒಳ್ಳೆಯ, ಜಾಗೃತ, ಸಂಘಟಿತ ಸಮಾಜದ ನಿರ್ಮಾಣದ ಸಂಘದ ಗುರಿ. ಅವತಾರ ಪುರುಷರೂ ಮಾಡುತ್ತಿದ್ದ ನಿತ್ಯ ಉಪಾಸನೆಯನ್ನು ಸಂಘದ ನಿತ್ಯಕಾರ್ಯಕ್ಕೆ ತಳಕು ಹಾಕಿದ್ದು ನಿತ್ಯ ಶಾಖೆಯಲ್ಲಿ ಸಾಧನೆ ಮಾಡುತ್ತಿರುವ ಸ್ವಯಂಸೇವಕರ ಬದ್ಧತೆ. 98 ವರ್ಷಗಳಲ್ಲಿ ಮೂಡುತ್ತಾ ಬೆಳೆಯುತ್ತಾ ಬಂದ ಹಿಂದೂ ರಾಷ್ಟ್ರೀಯ ಕಲ್ಪನೆಯನ್ನು ವಿವರಿಸಿದರು; ಸಮಾಜದ ವಿವಿಧ ಸಾಂಸ್ಕೃತಿಕ– ಧಾರ್ಮಿಕ ಕಾರ್ಯಕ್ರಮಗಳಲ್ಲಿ ಬಿಂಬಿತವಾಗುತ್ತಿರುವ ಹಿಂದು ಸಂಕೇತಗಳು ಸಂಘಕಾರ್ಯದ ಪ್ರಭಾವ ಎಂದು ಅಭಿಪ್ರಾಯಪಟ್ಟರು.

ಸಂಘಟನಾತ್ಮಕ ಕ್ರಿಯಾಶೀಲ ಹಿಂದು ಸಮಾಜ ನಿರ್ಮಾಣ ಆಗುತ್ತಿರುವುದು ಸಂಘದ ಇನ್ನೊಂದು ಸಾಧನೆ. ಸ್ವಯಂಸೇವಕರು 1.75 ಲಕ್ಷ ಸೇವೆ ಮಾಡುತ್ತಿದ್ದಾರೆ; ಎಲ್ಲಾ ಸಾಮಾಜಿಕ ಕ್ಷೇತ್ರಗಳನ್ನು ತಲುಪಿದ್ದಾರೆ. ಇನ್ನೂ ಉಳಿದಿರುವ ಕೆಲವು ಸಮಾಜದ ಅಸಂಘಟಿತ ಬಿಂದುಗಳನ್ನು ಜಾಗೃತಗೊಳಿಸಿ, ಸಂಘಟಿಸಿ, ಶಕ್ತಿಶಾಲಿಯನ್ನಾಗಿ ಮಾಡಬೇಕಿದೆ ಎಂದರು.

ಸಂಘಟಿತ ಸಮಾಜವೇ ಜಾಗತಿಕ ಸ್ಥಾನ ಪಡೆದುಕೊಂಡು ಎಲ್ಲ ಮುಖಗಳಲ್ಲಿ ವಿಕಾಸಗೊಳ್ಳುತ್ತಿದೆ. ಭಾರತವನ್ನು ದುರ್ಬಲಗೊಳಿಸುವ ಶಕ್ತಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ವಿವಿಧ ಗಣ್ಯರು ವ್ಯಕ್ತಪಡಿಸಿದ ಸಂಘದ ಕಾರ್ಯಪರಿಣಾಮಗಳನ್ನು ಶ್ಲಾಘಿಸಿದರು.

ವಿಜ್ಞಾನ, ತಂತ್ರಜ್ಞಾನ, ಸೈನಿಕ ಶಕ್ತಿಯ ವಿಕಾಸವೂ ಸಂಘಟನಾತ್ಮಕ ಶಕ್ತಿಯ ಹೆಮ್ಮೆಯ ಸ್ವರೂಪ ಎಂದರು. ವ್ಯಕ್ತಿ ನಿರ್ಮಾಣದಿಂದ ರಾಷ್ಟ್ರದ ನಿರ್ಮಾಣ ನಮ್ಮ ಉದ್ದೇಶ ಎಂದು ವಿವಿಧ ಉದಾಹರಣೆಗಳಿಂದ ವಿವರಿಸಿದರು.




ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿದರ್ಭ ಪ್ರಾಂತದ ಪ್ರಥಮ ವರ್ಷ ಸಂಘ ಶಿಕ್ಷಾ ವರ್ಗ ಗೋಂಡಿಯಾದ ಲಿಟ್ಲ್ ವುಡ್ಸ್ ಸ್ಕೂಲ್‌ನಲ್ಲಿ ನಡೆಯಿತು.



ರಾಷ್ಟ್ರೀಯ ಸ್ವಯಂಸೇವಕ ಸಂಘದ, ತ್ರಿಪುರ ಪ್ರಾಂತದ ಪ್ರಥಮ ವರ್ಷ ಸಂಘ ಶಿಕ್ಷಾ ವರ್ಗ ಸಂಪನ್ನಗೊಂಡಿದೆ. ಸಾಮಾರೋಪ ಸಮಾರಂಭದಲ್ಲಿ ಪದ್ಮಶ್ರೀ ವಿಕ್ರಂ ಬಹದ್ದೂರ್ ಜಮಾತಿಯಾ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.



ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.